ಸಂಪುಟ : 8 ಸಂಚಿಕೆ : 286 ಪುಟ : 4 ಬೆಲೆ : 3.00 ರವಿವಾರ ಡಿಸೆಂಬರ್ 24, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 286 Pages : 4 Price : 3.00 Sunday December 24, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಕಾನೂನು, ಪ್ರವಾಸೋದ್ಯಮ ಸಚಿವರ ಜಿಲ್ಲಾ ಪ್ರವಾಸ



**■ ವಿಜಯಸಾಕ್ಷಿ ಸುದ್ದಿ, ಗದಗ**

ಕಾನೂನು, ಪ್ರವಾಸೊದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ. ಪಾಟೀಲರು ಡಿ.24ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನಿಂದ ರಸ್ತೆಯ ಮೂಲಕ ಹೊರಟು ಸಾಯಂಕಾಲ 6 ಗಂಟೆಗೆ ಹಾವೇರಿಗೆ ಆಗಮಿಸಿ, ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ರಾತ್ರಿ 10.30 ಗಂಟೆಗೆ ಗದುಗಿಗೆ ಆಗಮಿಸಿ ವಾಸ್ತವ್ಯ ಮಾಡುವರು.

ಡಿ.25ರಂದು ಮುಂಜಾನೆ 10.30 ಗಂಟೆಗೆ ರಸ್ತೆಯ ಮೂಲಕ ಹಾವೇರಿಗೆ ಪ್ರಯಾಣ ಬೆಳೆಸಿ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 3.30 ಗಂಟೆಗೆ ಹಾವೇರಿಯಿಂದ ಸಿರ್ಸಿಗೆ ಪ್ರಯಾಣ ಬೆಳೆಸಿ, ಸಾಯಂಕಾಲ 5 ಗಂಟೆಗೆ ಪಕ್ಷದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಾಸ್ತವ್ಯ ಮಾಡುವರು. ಡಿ.26ರಂದು ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಾಯಂಕಾಲ 6 ಗಂಟೆಗೆ ರಸ್ತೆಯ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆ ತಿಳಿಸಿದೆ.

## ಇಂದು ನಗರಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ



**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಸ್ಟೇಷನ್ ರಸ್ತೆಯಲ್ಲಿರುವ ಮುನ್ಸಿಪಲ್ ಮೈದಾನದಲ್ಲಿ ಡಿ.24ರಂದು ಮಧ್ಯಾಹ್ನ 2.30 ಗಂಟೆಗೆ ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ವತಿಯಿಂದ ಆಯೋಜಿಸಿರುವ ಕಾರ್ಯಕರ್ತರ ಸಭೆಗೆ ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆಗಮಿಸಲಿದ್ದಾರೆ.

ಈ ಸಭೆಯಲ್ಲಿ ಶಾಸಕರು, ಮಾಜಿ ಸಚಿವರಾದ ಸಿ.ಸಿ. ಪಾಟೀಲ, ಸಂಸದರಾದ ಶಿವಕುಮಾರ ಉದಾಸಿ, ಪಿ.ಸಿ. ಗದ್ದಿಗೌಡ್ರ, ಶಾಸಕ ಡಾ. ಚಂದ್ರು ಲಮಾಣಿ, ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ, ಪ್ರದೀಪ ಶೆಟ್ಟರ, ಮಾಜಿ ಶಾಸಕ ಕಳಕಪ್ಪ ಬಂಡಿ, ಅನಿಲ ಮೆಣಸಿನಕಾಯಿ ಹಾಗೂ ಪಕ್ಷದ ಅನೇಕ ನಾಯಕರುಗಳು ಭಾಗವಹಿಸಲಿದ್ದಾರೆ.

ಗದಗ ಜಿಲ್ಲೆಯ ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು, ಅಭಿಮಾನಿಗಳು, ಸಮಸ್ತ ಸಾರ್ವಜನಿಕ ಬಂಧುಗಳು ಆಗಮಿಸಬೇಕೆಂದು ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ವ್ಯತ್ಯಯ

**■ ವಿಜಯಸಾಕ್ಷಿ ಸುದ್ದಿ, ಗದಗ**

ಡಿ. 26ರಂದು 110 ಕೆವ್ಹಿ ಗದಗ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ 110 ಕೆವ್ಹಿ ಗದಗ ಉಪಕೇಂದ್ರದಿಂದ ವಿದ್ಯುತ್ ಪೂರೈಕೆಯಾಗುವ ಜಿಮ್ಸ್ ಆಸ್ಪತ್ರೆ, ಕುಡಿಯುವ ನೀರಿನ ಸ್ಥಾವರಗಳು, 33 ಕೆವ್ಹಿ ಐ.ಪಿಪಿ–ಕೆ.ಪಿ.ಸಿ.ಎಲ್, ನಾಗಾವಿ, ಮಲ್ಲಸಮುದ್ರ, ಪಯೋನಿರ್, ಟಿ.ಡಿ.ಪಿ ಎಲ್ 1 ಮತ್ತು 2, 33 ಕೆವಿ ಉಪಕೇಂದ್ರ–ಹುಲಕೋಟಿ, ಲಕ್ಕುಂಡಿ, ಕೆಎಚ್‌ಬಿ ಹಾಗೂ ಎಲ್ಲಾ 11 ಕೆವ್ಹಿ ನಗರ, ಗ್ರಾಮೀಣ, ಕೈಗಾರಿಕಾ, ಸೋಲಾರ್ ಐ.ಪಿ.ಪಿ, ಮತ್ತು ನೀರಾವರಿ ಪಂಪಸೆಟ್‌ಗಳ ವಿದ್ಯುತ್ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸದರಿ ಪ್ರಕಟಣೆ ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ಪ್ರಕಟಣೆ ತಿಳಿಸಿದೆ.

### ಜನವರಿಯಿಂದ ತಾಲೂಕು ಮಟ್ಟದಲ್ಲೂ ಜನತಾ ದರ್ಶನ; ಸಚಿವ ಸಂತೋಷ ಲಾಡ್

# ಅಧಿಕಾರಿಗಳು ಚುರುಕಾಗಿ ಕಾರ್ಯೋನ್ಮುಖರಾಗಿ



ಎಲ್ಲ ಇಲಾಖೆಗಳ ಅಧಿಕಾರಿಗಳು ಚುರುಕಾಗಿ ಕಾರ್ಯ ಪ್ರವೃತ್ತರಾಗಬೇಕು. ಮುಂದಿನ ಆರು ತಿಂಗಳು ಕುಡಿಯುವ ನೀರು, ಮೇವು, ಉದ್ಯೋಗ ಸಮಸ್ಯೆ ಬರಬಹುದು. ಇದಕ್ಕೆ ಈಗಿನಿಂದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಅಗತ್ಯವಿದ್ದಲ್ಲಿ ಹೊಸ ಬೋರ್‌ವೆಲ್ ಕೊರೆಸಲು ಕ್ರಮ ವಹಿಸಬೇಕು. ಖಾಸಗಿ ಬೋರ್‌ವೆಲ್ ಅಥವಾ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಟೆಂಡರ್ ಮಾಡಿ, ಅವರಿಗೆ ಮುಂಚಿತವಾಗಿ ಆದೇಶ ನೀಡಲು ಸಚಿವ ಸಂತೋಷ್ ಲಾಡ್ ಸೂಚಿಸಿದರು.

**■ ವಿಜಯಸಾಕ್ಷಿ ಸುದ್ದಿ, ಧಾರವಾಡ**

ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗುತ್ತಿದ್ದು, ಸರಕಾರದ ಹಂತದಲ್ಲಿ ಪರಿಹರಿಸಬೇಕಾದ ಬಹುತೇಕ ಅಹವಾಲುಗಳನ್ನು ಸ್ಥಳೀಯವಾಗಿ ಪರಿಹರಿಸಲಾಗಿದೆ. ಬರುವ ಜನವರಿಯಿಂದ ಸಾರ್ವಜನಿಕರ ಅನಕೂಲಕ್ಕಾಗಿ ತಾಲೂಕು ಹಂತದಲ್ಲಿ ಜನತಾ ದರ್ಶನ ಆಯೋಜಿಸಲಾಗುವುದು ಎಂದು ಕಾರ್ಮಿಕ ಸಚಿವ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಅವರು ಶನಿವಾರ ಬೆಳಿಗ್ಗೆ ಧಾರವಾಡ ಜಿಲ್ಲಾಡಳಿತದಿಂದ ಜಿ.ಪಂ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವರ ಜನತಾ ದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುಖ್ಯಮಂತ್ರಿಗಳ ನಿರ್ದೇಶನದಂತೆ ಕಳೆದ ಸಪ್ಟೆಂಬರ್‌ನಿಂದ ಇಲ್ಲಿವರೆಗೆ ಜಿಲ್ಲೆಯಲ್ಲಿ ಮೂರು ಜನತಾ ದರ್ಶನ ಕಾರ್ಯಕ್ರಮಗಳನ್ನು ಆಯೋಜಿಸಿ, ಸಾರ್ವಜನಿಕರಿಂದ ಸುಮಾರು 730 ಅಹವಾಲುಗಳನ್ನು ಸ್ವೀಕರಿಸಲಾಗಿತ್ತು. ಅದರಲ್ಲಿ 650 ಅಹವಾಲುಗಳನ್ನು



ಇತ್ಯರ್ಥಪಡಿಸಲಾಗಿದೆ. ಉಳಿದ ಅರ್ಜಿಗಳನ್ನು ಪರಿಹರಿಸಲು ಸಂಬಂಧಿಸಿದ ಇಲಾಖೆಗಳಿಗೆ ರವಾನಿಸಲಾಗಿದೆ. ಜಿಲ್ಲೆಯಲ್ಲಿ ಜನತಾ ದರ್ಶನ ಕಾರ್ಯಕ್ರಮ ಯಶಸ್ವಿಯಾಗುತ್ತಿದ್ದು, ಸಮಸ್ಯೆ–ಅಹವಾಲುಗಳ ಸಲ್ಲಿಕೆ ಕಡಿಮೆ ಆಗಿದೆ ಎಂದು ಹೇಳಿದರು.

ರಾಜ್ಯ ಹಿಂದೆಂದೂ ಕಾಣದ ಬರ ಪರಿಸ್ಥಿತಿ ಎದುರಾಗಿದೆ. ಇದು ಮುಂದಿನ ಆರು ತಿಂಗಳಲ್ಲಿ ಇನ್ನೂ ತೀವ್ರವಾಗುವ ಸಂಭವವಿದ್ದು, ಅಧಿಕಾರಿಗಳು ಸಾರ್ವಜನಿಕರಿಗೆ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಸಚಿವರು ಹೇಳಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಉಪ ಪೊಲೀಸ್ ಆಯುಕ್ತ ರಾಜೀವ ಎಂ., ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ ಬ್ಯಾಕೋಡ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ., ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಮಹಾನಗರ ಪಾಲಿಕೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ, ಹು–ಧಾ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ.ಸಂತೋಷ ಬಿರಾದಾರ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಎಸ್. ಕೆಳದಿಮಠ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಕಿರಣ ಕುಮಾರ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಶಶಿ ಪಾಟೀಲ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಸಂಗಪ್ಪ ಗಾಬಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಚಾಲನೆ

# ಡಿ.26ರಿಂದ 'ಯುವನಿಧಿ' ನೋಂದಣಿ: ಡಿಸಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಸರಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ನಿರುದ್ಯೋಗಿ ಪದವೀಧರರಿಗೆ ನಿರುದ್ಯೋಗ ಭತ್ಯೆ ನೀಡುವ 'ಯುವನಿಧಿ' ಯೋಜನೆಗೆ ಅರ್ಹ ಫಲಾನುಭವಿಗಳು ಡಿಸೆಂಬರ್ 26ರಿಂದ ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಗದಗ ಜಿಲ್ಲೆಯಲ್ಲಿ 2023ರ ವರ್ಷದಲ್ಲಿ ತೇರ್ಗಡೆಯಾದ ದಿನಾಂಕದಿಂದ 180 ದಿನಗಳು ಕಳೆದರೂ ಉದ್ಯೋಗ ಲಭಿಸದ ಪದವೀಧರರು ಮತ್ತು ಡಿಪ್ಲೋಮಾ ಪಡೆದ ನಿರುದ್ಯೋಗಿ ವಿದ್ಯಾವಂತರಿಗೆ ಕರ್ನಾಟಕ 'ಯುವನಿಧಿ' ಯೋಜನೆಯಡಿ ನಿರುದ್ಯೋಗ ಭತ್ಯೆಯನ್ನು ಪಾವತಿಸಲಾಗುವುದು.

ಡಿಸೆಂಬರ್ 26ರಿಂದ ಸೇವಾಸಿಂಧು ಪೋರ್ಟಲ್ ಮೂಲಕ ಈ ಯೋಜನೆಗೆ ಅರ್ಜಿಗಳನ್ನು ಸಲ್ಲಿಸಬಹುದು. ಜನವರಿ– 2024ರಿಂದ ಯೋಜನೆ ಜಾರಿಗೊಳ್ಳಲಿದ್ದು, ಅರ್ಹ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ದೊರೆಯಲಿದೆ. ಪದವೀಧರರಿಗೆ ರೂ 3000 ಹಾಗೂ ಡಿಪ್ಲೋಮಾ ತೇರ್ಗಡೆಯಾದವರಿಗೆ ರೂ 1500 ಮಾಸಿಕ ನಿರುದ್ಯೋಗ ಭತ್ಯೆಯನ್ನು ಆಧಾರ್ ಜೋಡಣೆ–ಯಾದ ಅಭ್ಯರ್ಥಿಗಳಿಗೆ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

**ಯುವ ನಿಧಿ ನೋಂದಣಿಗೆ ಚಾಲನೆ**

ಯುವನಿಧಿ ಯೋಜನೆಗೆ ಡಿ.26ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿಗಳ ಘನ ಉಪಸ್ಥಿತಿಯಲ್ಲಿ ಎಲ್ಲಾ ಸಚಿವ ಸಂಪುಟದ ಸಚಿವರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಮತ್ತು ಇತರೆ ಗಣ್ಯಮಾನ್ಯರ ಉಪಸ್ಥಿತಿಯಲ್ಲಿ ನೋಂದಣಿ ಪ್ರಕಿಯೆ ಚಾಲನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಅರ್ಹ ನಿರುದ್ಯೋಗಿಗಳು ಸೇವಾಸಿಂಧು ಪೋರ್ಟಲ್ https://sevasindhugs.karnataka.gov.in ಗೆ ಭೇಟಿ ನೀಡಿ ನೋಂದಣಿ ಮಾಡಬಹುದು. ಇದಲ್ಲದೇ ಕರ್ನಾಟಕ ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೂಡ ಅರ್ಜಿ ಸಲ್ಲಿಸಬಹುದು.

### ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳು

# ಬಸವಣ್ಣನವರು ಇಷ್ಟಲಿಂಗದ ಜನಕರು

**■ ವಿಜಯಸಾಕ್ಷಿ ಸುದ್ದಿ, ಗದಗ**

ಭಾರತೀಯ ಸಂಸ್ಕೃತಿ ವಿವಿಧತೆಯಲ್ಲಿ ಏಕತೆ ಸಾಧಿಸುವ ಸಂಸ್ಕೃತಿ ಆಗಿದೆ. ಹಿಂದೂ ಸಂಸ್ಕೃತಿಯಲ್ಲಿ ವರ್ಣಾಶ್ರಮ ಪದ್ಧತಿ ಇದೆ. ಬಸವಾದಿ ಶಿವಶರಣರು ಸಮಾಜದಲ್ಲಿರುವ ಶೋಷಣೆ, ಜಾತಿ, ಮತ–ಪಂಥ ಬೇಧ ಭಾವಗಳನ್ನು ಅಳಿಸಿ ಸಮಾನತೆಯ ತತ್ತ್ವವನ್ನು ಸಮಾಜದಲ್ಲಿ ಅನುಷ್ಠಾನಕ್ಕೆ ತರಲು ಸಾಕಷ್ಟು ಶ್ರಮಿಸಿದ್ದಾರೆ. ಬಸವಾದಿ ಶಿವಶರಣರ ವಚನಗಳನ್ನು ತಪ್ಪಾಗಿ ಅರ್ಥೈಸಿಕೊಂಡು ಮತ್ತೆ ಬಸವಣ್ಣನವರು ಹಿಂದೂ ಸಂಸ್ಕೃತಿಯ ಪ್ರತಿಪಾದಕರು ಎಂದು ಕೆಲವು ಪಟ್ಟಭದ್ರ ಹಿತಾಸಕ್ತಿಗಳು, ವಿದ್ವಾಂಸರು ಹೇಳುತ್ತಿರುವುದು ಅತ್ಯಂತ ಖಂಡನೀಯ ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ನುಡಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2672ನೇ ಶಿವಾನುಭವ ಕಾರ್ಯಕ್ರಮದ ಸಮ್ಮುಖ ವಹಿಸಿ ಮಾತನಾಡಿದ ಶ್ರೀಗಳು, ಬಸವಣ್ಣನವರು ಇಷ್ಟಲಿಂಗದ ಜನಕರು. ಏಕದೇವೋಪಾಸನೆಯ ಹರಿಕಾರರು.



ಬಸವಣ್ಣನವರ ಸಮಕಾಲೀನ ಶರಣರು ಸ್ಥಾವರ ದೇವತೆಗಳ ಪೂಜೆಯನ್ನು ಖಂಡಿಸಿರುವುದು ಅನೇಕ ವಚನಗಳಲ್ಲಿ ಕಾಣುತ್ತೇವೆ. ಇಷ್ಟಲಿಂಗದ ಪ್ರತಿಪಾದಕರಾದ ಬಸವಣ್ಣನವರು, ಸ್ಥಾವರ ಲಿಂಗದ ಪೂಜೆಯ ಪ್ರತಿಪಾದಕರು ಆಗಿದ್ದರು ಎಂದು ತಪ್ಪು ಸಂದೇಶ ಬಿಂಬಿಸುತ್ತಿರುವ ವಿದ್ವಾಂಸರು ವಚನ ಸಾಹಿತ್ಯವನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು ಎಂದು ತಿಳಿಸಿದರು.

ಬಸವಾದಿ ಶರಣರಲ್ಲಿ ಬಹಳ ಉನ್ನತವಾಗಿರುವಂತ ಸ್ಥಾನವನ್ನು ಪಡೆದವರು ಮಾದಾರ ಚೆನ್ನಯ್ಯನವರು. ಬಸವಣ್ಣನವರು ಅನೇಕ ವಚಗಳಲ್ಲಿ ಮಾದಾರ ಚೆನ್ನಯ್ಯನವರ ಕುರಿತು ಭಕ್ತಿ, ಭಾವ, ಶ್ರದ್ಧೆಯನ್ನು ಉಲ್ಲೇಖಿಸಿದ್ದಾರೆ. ದೇವರು ಭಕ್ತಿಯನ್ನು ನೋಡುತ್ತಾನೆ. ಶ್ರೀಮಂತಿಕೆ, ಬಡತನ, ಜಾತಿ ಮತ ಪಂಥಗಳನ್ನು ನೋಡುವದಿಲ್ಲ. ಬಸವಣ್ಣನವರು ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ ಎಂದು ಉಲ್ಲೇಖಿಸಿದ್ದಾರೆ. ನಮ್ಮಲ್ಲಿ ಪರಿಶುದ್ಧವಾದ ಭಕ್ತಿ ಇದ್ದರೆ ಮಾತ್ರ ಪರಶಿವ ಒಲಿಯುತ್ತಾನೆ ಎಂದು ಬಸವಣ್ಣನವರು ಅನೇಕ ವಚನಗಳಲ್ಲಿ ಹೇಳಿದ್ದಾರೆ ಎಂದು ಶ್ರೀಗಳು ನುಡಿದರು.

ಶರಣ ಮಾದಾರ ಚನ್ನಯ್ಯನವರ ಕುರಿತು ಅಧ್ಯಾಪಕ ಪಿ. ನಾಗೇಂದ್ರ ಮಾತನಾಡಿ, ಮಾದಾರ ಚೆನ್ನಯ್ಯನವರು ಶಿವ ಭಕ್ತನಾಗಿರದೇ, ಕಾಯಕ ವ್ಯಕ್ತಿಯಾಗಿರದೇ, ಜ್ಞಾನದ ವ್ಯಕ್ತಿಯಾಗಿದ್ದರು. ಶರಣರು ವಚನಗಳ ಮೂಲಕ ಭಕ್ತಿಯ ಪ್ರಜ್ಞೆ ಜೊತೆಗೆ ಜ್ಞಾನವನ್ನು ಬಿತ್ತಿದರು. ಜ್ಞಾನವೇ ಜಗತ್ತನ್ನು ಆಳುತ್ತದೆ. ಸಮಭಾವ, ಸಮಚಿತ್ತ, ಸಮಸಮಾಜದ ಸಮಾಜ ನಿರ್ಮಾಣಕ್ಕೆ ವಚನಸಾಹಿತ್ಯವೇ ಅಡಿಪಾಯ ಎಂದು ತಿಳಿಸಿದರು.

ಉನ್ನತ ಶ್ರೇಣಿಯಲ್ಲಿ ಎಲ್‌ಎಲ್‌ಎಮ್ ಪದವಿ ಪಡೆದ ನ್ಯಾಯವಾದಿ ಹಾಗೂ ಉಪನ್ಯಾಸಕಿ, ನಾಜೀಮಾ ಎನ್.ಮುಲ್ಲಾ ಅವರನ್ನು ಸಂಮಾನಿಸಲಾಯಿತು. ಮೃತ್ಯುಂಜಯ ಹಿರೇಮಠ, ಗುರುನಾಥ ಸುತಾರ ಸಂಗಡಿಗರು ವಚನಸಂಗೀತ ಹಾಡಿದರು. ಭೂಮಿಕಾ ಹೊಸಹಳ್ಳಿಮಠ ಧರ್ಮಗ್ರಂಥ ಪಠಣಗೈದರು.

▸▸ 3ನೇ ಪುಟಕ್ಕೆ

## ಕ್ಷಣಿಕ ಸುಖಕ್ಕೆ ಬಲಿಯಾಗಬೇಡಿ



**■ ವಿಜಯಸಾಕ್ಷಿ ಸುದ್ದಿ, ನರಗುಂದ**

ಇಂದಿನ ದಿನಗಳಲ್ಲಿ ಯುವಕರು ಹೆಚ್ಚಾಗಿ ಮಾದಕ ಪದಾರ್ಥಗಳ ವ್ಯಸನಕ್ಕೆ ಬಲಿಯಾಗಿ ತಮ್ಮ ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮಾದಕ ವಸ್ತುಗಳ ಸೇವನೆ ಮಾಡುವ ಯುವ ಸಮುದಾಯ ಹೆಚ್ಚಾಗಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದರಿಂದ ಸಮಾಜದ ಸ್ವಾಸ್ಥ್ಯ ಕೂಡ ಹಾಳಾಗುತ್ತಿದೆ ಎಂದು ಸಿಪಿಐ ಮಂಜುನಾಥ ನಡುವಿನಮನಿ ಹೇಳಿದರು.

ತಾಲೂಕಿನ ಚಿಕ್ಕನರಗುಂದ ಗ್ರಾಮದ ಪದವಿಪೂರ್ವ ಕಾಲೇಜಿನಲ್ಲಿ ನರಗುಂದ ಪೊಲೀಸ್ ಠಾಣೆ ಹಾಗೂ ಪದವಿಪೂರ್ವ ಕಾಲೇಜು ಚಿಕ್ಕನರಗುಂದ ಇವರ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ, ಮಾದಕ ವಸ್ತುಗಳ ಬಳಕೆ ಮತ್ತು ಪೂರೈಕೆಯ ವಿರುದ್ಧ ವಿಶೇಷ ಅಭಿಯಾನ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳ ಚಟಕ್ಕೆ ಬಲಿಯಾಗದೆ ತಮ್ಮ ಜೀವನವನ್ನು ಹಸನಾಗಿಸಿಕೊಳ್ಳಬೇಕು. ಹದಿ ಹರೆಯದ ವಯಸ್ಸಿನಲ್ಲಿ ಕ್ಷಣಿಕ ಸುಖ ನೀಡುವ ಮಾದಕ ವಸ್ತುಗಳ ಮೋಹಕ್ಕೆ ಬಿದ್ದು ಜೀವನವನ್ನು ಹಾಳು ಮಾಡಿಕೊಳ್ಳಬೇಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ. ಮಾಜಿ ಅಧ್ಯಕ್ಷ ಮುತ್ತು ರಾಯರಡ್ಡಿ, ಎಸ್‌ಡಿಎಮ್‌ಸಿ ಅಧ್ಯಕ್ಷ ಶರಣಬಸಪ್ಪ ಹಳೇಮನಿ, ಪ್ರಾಂಶುಪಾಲ ಎಸ್.ವ್ಹಿ. ದಂಡನಾಯ್ಕರ, ಕಾಲೇಜು ಉಪನ್ಯಾಸಕರು ಹಾಗೂ ವಿಧ್ಯಾರ್ಥಿಗಳು ಭಾಗವಹಿಸಿದ್ದರು.

## ಡಬಾಲಿ ಕಾಲೇಜಿನಲ್ಲಿ ಅಪರಾಧ ತಡೆ ಮಾಸಾಚರಣೆ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಇಲ್ಲಿನ ಎಫ್.ಎಂ. ಡಬಾಲಿ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಶಿರಹಟ್ಟಿ ಪೊಲೀಸ್ ಠಾಣೆ ವತಿಯಿಂದ 'ಅಪರಾಧ ತಡೆ ಮಾಸಾಚರಣೆ'ಯ ನಿಮಿತ್ತ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ನೆರವೇರಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪಿಎಸ್‌ಐ ಈರಣ್ಣ ರಿತ್ತಿ, ಸಮಾಜ ಸುಸ್ಥಿರವಾಗಿ ನೆಲೆಗೊಳ್ಳಬೇಕಾದರೆ ಅಪರಾಧಗಳನ್ನು ತಡೆಗಟ್ಟುವಲ್ಲಿ ನಾವೆಲ್ಲರೂ ಜಾಗೃತರಾಗಬೇಕು. ಯುವ ಜನಾಂಗದಲ್ಲಿ ಸರಿಯಾದ ತಿಳುವಳಿಕೆ ಇಲ್ಲದೆ ಸಮಾಜದಲ್ಲಿ ಅಪರಾಧ ಕೃತ್ಯಗಳು ಹೆಚ್ಚುತ್ತಿವೆ. 18 ವರ್ಷದ ಒಳಗಿನ ಮಕ್ಕಳು ಅದೆಷ್ಟೋ ಬಾರಿ ಇನ್ನೊಬ್ಬರ ಪ್ರೇರಣೆಯಿಂದ ಕೆಟ್ಟ ಕೃತ್ಯಗಳಲ್ಲಿ ತೊಡಗುತ್ತಾರೆ. ಇಂತಹ ಅಹಿತಕರ ಘಟನೆಗಳು ಸಮಾಜದಲ್ಲಿ ನಡೆಯದಂತೆ ಇಂದಿನ ಯುವ ಪೀಳಿಗೆ ಸಕಾರಾತ್ಮಕ ಚಿಂತನೆಯಿಂದ ಸಮಾಜದ ಸ್ವಾಸ್ಥ್ಯ ಕಾಪಾಡಬೇಕು. ಸಾರ್ವಜನಿಕ ಹಿತಾಸಕ್ತಿಗಾಗಿ ಎಂದಿಗೂ ನಮ್ಮ ಪೊಲೀಸ್ ಇಲಾಖೆ ಸೇವೆ ಸಲ್ಲಿಸುತ್ತದೆ ಎಂದರು.

ಉಪನ್ಯಾಸಕ ಎನ್.ಹನುಮರಡ್ಡಿ ಅಧ್ಯಕ್ಷತೆ ವಹಿಸಿದ್ದರು. ಎಂ.ಎಚ್. ಹನುಮಸಾಗರ, ಮಹಾದೇವಪ್ಪ ಲಮಾಣಿ, ವಾಯ್. ಎಸ್. ಪಂಗಣ್ಣವರ, ಪಿ.ಎನ್. ಕುಲಕರ್ಣಿ, ಸುಧಾ ಎಸ್.ಹುಚಣ್ಣವರ, ಎಫ್.ಎ. ಬಾಬುಖಾನವರ, ಬಸವರಾಜ ಶಿರುಂದ, ಸುನೀಲ ಲಮಾಣಿ, ಎಂ.ಕೆ. ಲಮಾಣಿ ಮುಂತಾದವರು ಉಪಸ್ಥಿತರಿದ್ದರು.

### ಡಿ.25ರಂದು ಗುರವ್ವ ಶಿ. ಹೊರಟ್ಟಿ ಸ್ಮರಣಾರ್ಥ ನಡೆಯುವ ವಿಶೇಷ ಶಿವಾನುಭವ ನಿಮಿತ್ತ ಲೇಖನ

# 'ಅವ್ವ'ನಂತಿದ್ದ ನನ್ನ ಅತ್ತೆ ಗುರವ್ವ

ಜನೋಪಯೋಗಿ ಬಸವರಾಜ ಹೊರಟ್ಟಿಯವರನ್ನು ಹೆತ್ತು ನಾಡಿನ ಸೇವೆಗರ್ಪಿಸಿದ ಪುಣ್ಯವಂತೆ ತಾಯಿ ಗುರವ್ವನವರು. ನನಗೆ ಅತ್ತೆಯಾಗಿದ್ದು ಸಹ ನನ್ನ ಪೂರ್ವಜನ್ಮದ ಪುಣ್ಯ. ಎಂದಿಗೂ ಅತ್ತೆಯಾಗದೇ ಅವ್ವನಂತಿದ್ದ ನನ್ನ ಅತ್ತೆ ಗುರವ್ವನವರನ್ನು ಸ್ಮರಿಸಿಕೊಳ್ಳುವುದೇ ನನಗೊಂದು ಸೌಭಾಗ್ಯ. ಕಳೆದ 12 ವರ್ಷಗಳಿಂದ ನನ್ನ ಅತ್ತೆ ನನ್ನೊಂದಿಗೆ ಇಲ್ಲದಿದ್ದರೂ ಅವಳ ತ್ಯಾಗ ಕುಟುಂಬಕ್ಕಾಗಿ ಮಾಡಿದ ಸೇವೆ ಸದಾಕಾಲ ನಮಗೆಲ್ಲ ಚೈತನ್ಯದಾಯಿ.

ಅವಳ ನೆನಪು ನನ್ನ ಎದೆಯ ಒರತೆಯಲ್ಲಿ ತಿಳಿನೀರ ಬುಗ್ಗೆಯಂತೆ ಉಕ್ಕುತ್ತದೆ. ಅವ್ವನಂತಿದ್ದ ನನ್ನ ಅತ್ತೆ ನನ್ನ ಪಾಲಿನ ಸರ್ವಸ್ವವಾಗಿದ್ದಳು. ಅವಳು ನನ್ನನ್ನು ಸದಾಕಾಲ ಕಾಯುತ್ತಾಳೆ, ಕಾಡುತ್ತಾಳೆ, ನನ್ನ ನೆನಪಿನಂಗಳದಲ್ಲಿ ನಿತ್ಯ ಪೂಜೆಗೈಯುತ್ತಾಳೆ. ಇಂತಹ ಅತ್ತೆಯನ್ನು ನಾನು ಹಾಗೂ ಇಂತಹ ತಾಯಿಯನ್ನು ನನ್ನ ಮನೆಯವರಾದ ಬಸವರಾಜ ಹೊರಟ್ಟಿಯವರು ಪಡೆದಿದ್ದು ನಮ್ಮ ಪಾಲಿನ ಸೌಭಾಗ್ಯ.

ಸಂಸಾರದ ನೊಗ ಹೊತ್ತು, ಏಗಿ, ತೇಗಿ, ಕಷ್ಟ ಕಾರ್ಪಣ್ಯಗಳ ಜೊತೆ ಸೆಣಸುತ್ತಾ, ಆಯುಷ್ಯದ ಅರ್ಧ ಜೀವನವನ್ನು ಸವೆಸುತ್ತಾ, ಅವಮಾನ, ಅಪಮಾನಗಳನ್ನು ಎದುರಿಸುತ್ತಾ, ನೋವಿನ ನಡುವೆಯೂ ತುಟಿ ಅಂಚಿನಲ್ಲಿ ಸಮಾಧಾನದ ನಗೆಯನ್ನು ಸೂಸುತ್ತ, ಸಣ್ಣ ಪುಟ್ಟ ಸಂತೋಷ, ಖುಷಿಗಳನ್ನು ನನ್ನ ಪಾಲಿಗೆ ಬಂದ ಸೌಭಾಗ್ಯಗಳೆಂದು ಬಗೆಯುತ್ತಾ ಒಂದು ಹಂತದಲ್ಲಿ ಸೋತು ಹೋದೆನಾ ಎಂದು ಧಾವಿಸುತ್ತಾ, ಮರುಕ್ಷಣ ಎಲ್ಲ ಮರೆತು ಮೈ ಕೊಡವಿಕೊಳ್ಳುತ್ತಾ ಎದ್ದು ಸಾಗುವ ಶಕ್ತಿಯನ್ನು ದೇವರು ಹೆಣ್ಣಿಗೆ ಮಾತ್ರ ಕೊಟ್ಟಿದ್ದಾನಾ



ಎಂದುಕೊಳ್ಳುತ್ತಿರುವಾಗಲೇ ಅವ್ವನ ನೆನಪಾಗಿ, ಎದೆಯಗೂಡಿನ ತುಂಬೆಲ್ಲ ಹೊಗೆನಟ್ಟಂತಾಗಿ, ನರ ನರಗಳಲ್ಲಿ ನೋವು ಹರಡಿ ಕಣ್ಣು ತೇವಗೊಳ್ಳುತ್ತವೆ. ನನ್ನ ಪಾಲಿನ ಸರ್ವಸ್ವವಾಗಿದ್ದ ಅವ್ವ ನೆನಪಾಗುತ್ತಾಳೆ.

'ಅವ್ವ'ನಿಗೆ ಸಾಟಿಯಾದುದು ಮತ್ತೊಂದಿಲ್ಲ ಎಂದು ಜಗತ್ತಿನ ದಾರ್ಶನಿಕರು ಹೇಳುವ ಮಾತನ್ನು ಸತ್ಯವನ್ನು ಜಗತ್ತಿನ ಹೆಣ್ಣು ಮಾತ್ರ ಆಳವಾಗಿ ಅರಿಯಬಲ್ಲಳು. ಅದು ನನ್ನ ಅನುಭವಕ್ಕೆ ಬಂದಿರುವ ಕಟು ಸತ್ಯವೂ ಹೌದು. ಅದೇ ಶಕ್ತಿಯನ್ನು, ಅದೇ ಮಾರ್ಗದರ್ಶನವನ್ನು, ನೀಡಿದವರು ನನ್ನ ಅವ್ವನಂತಿದ್ದ ಅತ್ತೆ ಗುರವ್ವನವರು.

ನಾನೂ ತಾಯಿಯಾಗಿದ್ದೇನೆ. ಆದರೆ ನನ್ನ ಅವ್ವನಂತಾಗಲಿಲ್ಲವಲ್ಲ ಎಂಬ ಕೊರಗು ನನ್ನನ್ನು ಸದಾಕಾಲ ಕಾಡುತ್ತದೆ. ಅವ್ವನಂತಾಗುವುದು ಅದೆಷ್ಟು ಕಷ್ಟ ಎಂಬ ಭಾವ ಮೂಡುತ್ತದೆ. ಅವಳಿಗಿದ್ದ ಜೀವನದ ದೃಷ್ಟಿ, ಸಮುಷ್ಠಿ, ಸಂತೃಪ್ತಿ, ಸಮಾಧಾನ, ಲೌಕಿಕ ಜ್ಞಾನ, ಜೀವನವನ್ನು ನೋಡುವ ದೃಷ್ಟಿ, ಸಮಸ್ಯೆಗಳನ್ನು ಎದುರಿಸುವ ಶಕ್ತಿ, ಜಾಣ್ಮೆ, ಸಹನೆ, ನನ್ನಲ್ಲೇಕೆ ಮೂಡಲಿಲ್ಲ ಎಂದುಕೊಳ್ಳುತ್ತೇನೆ. ನನ್ನ ಬಾಲ್ಯ ನೆನಪಾಗುತ್ತದೆ.

ನನ್ನ ಅವ್ವನಂತಿರುವ ಅತ್ತೆಯವರಿಂದ ಬದುಕಿನ ಪಯಣದಲ್ಲಿ ಹೇಗೆ ಸಾಗಬೇಕೆಂಬುದನ್ನು ಹಾಗೂ ಕಷ್ಟ ಸುಖಗಳನ್ನು ಮಾನ ಅವಮಾನಗಳನ್ನು ಗೌರವ, ಅಗೌರವಗಳನ್ನು ಹೇಗೆ ಸಮ ಸಮಾನವಾಗಿ ಸ್ವೀಕರಿಸಿದಾಗ ಬದುಕು ಎಷ್ಟು ಸುಂದರವಾಗುತ್ತದೆ ಎಂಬುದನ್ನು ನಾನು ಕಲಿತೆ.

ಕಳೆದ ನಾಲ್ಕು ದಶಕಗಳಿಂದ ನನ್ನ ಮನೆಯವರಾದ ಬಸವರಾಜ ಹೊರಟ್ಟಿಯವರು ಅವರ ತಾಯಿಯವರ ಶ್ರೀರಕ್ಷೆಯಿಂದಲೇ ಜನಸೇವೆ ಮಾಡುವ ಸೌಭಾಗ್ಯ ಸಿಕ್ಕಿದೆ. ಅವರು ಕಷ್ಟಪಟ್ಟು ಬಸವರಾಜ ಹೊರಟ್ಟಿಯವರನ್ನು ಆಲದ ಮರದಂತೆ ಬೆಳೆಸಿದ್ದಾರೆ.

ಆ ನೆರಳಿನಲ್ಲಿ ಲಕ್ಷಾಂತರ ಜನರು ಆಶ್ರಯ ಪಡೆದು ನೆಮ್ಮದಿ ಹೊಂದಿ ಜೀವನ ಸಾಗಿಸುತ್ತಿರುವುದೇ ನಮಗೆಲ್ಲ ಹೆಮ್ಮೆ. ಇಂತಹ ಪುಣ್ಯವಂತ ಮಗನನ್ನು ಹೆತ್ತ ಗುರವ್ವನವರು ನಮ್ಮೆಲ್ಲರ ಪಾಲಿಗೆ ದೇವರು. ಈಗ ಅವರಿಲ್ಲದಿದ್ದರೂ ಅವರು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುತ್ತಿದ್ದೇವೆ ಎನ್ನುವುದೇ ನಮಗೆ ಸಮಾಧಾನ. ಅವಳನ್ನು ಮರೆಯುವುದು ಎಂದರೆ ನನ್ನನ್ನೇ ಮರೆತಂತೆ. ಅವಳು ನನ್ನ ಮಟ್ಟಿಗೆ ಇನ್ನೂ ಜೀವಂತವಾಗಿದ್ದಾಳೆ!

ಹೀಗಾಗಿ ಪ್ರತಿ ವರ್ಷ ನನ್ನ ತಾಯಿಯಂತಿದ್ದ ನನ್ನ ಅತ್ತೆಯನ್ನು ಸ್ಮರಿಸುವ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದೇವೆ. ಈ ಬಾರಿ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಶ್ರೀ ತೋಂಟದಾರ್ಯ ಮಠದಲ್ಲಿ ಡಿ.25ರಂದು ಸಾಯಂಕಾಲ 7 ಗಂಟೆಗೆ ಲಿಂಗಾಯತ ಪ್ರಗತಿಶೀಲ ಸಂಘ ಯಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ-ಗದಗ ಹಾಗೂ ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟ್ ಆಶ್ರಯದಲ್ಲಿ ಅವ್ವನ ಕುರಿತು ವಿಶೇಷ ಶಿವಾನುಭವ ಆಯೋಜಿಸುವ ಮೂಲಕ ನಾಡಿನ ತಾಯಂದಿರನ್ನು ನೆನೆಯುವ ಹಾಗೂ ಗೌರವಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಈ ಭಾವನಾತ್ಮಕ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೂಲಕ ಅವ್ವನ ಮಮತೆ ಪ್ರೀತಿಯ ಬೀಜವನ್ನು ಮತ್ತೆ ಹೆಚ್ಚೆಚ್ಚು ಬಿತ್ತಬೇಕಿದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೂಲಕ ಅವಿಭಕ್ತ ಕುಟುಂಬದ ಆಶಯಗಳನ್ನು ಗಟ್ಟಿಗೊಳಿಸೋಣ.



ಅತ್ತೆಯಂದಿರನ್ನು ತಾಯಂದಿರ ರೂಪದಲ್ಲಿ ನೋಡೋಣ. ಆ ಮೂಲಕ ಹೆತ್ತ ಮನೆಯಂತೆಯೇ ಗಂಡನ ಮನೆಯನ್ನು ಬೆಳಗೋಣ.

– ಹೇಮಲತಾ ಬಸವರಾಜ ಹೊರಟ್ಟಿ.



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಕಾಲೇಜಿನ ಬಿಕಾಂ ವಿದ್ಯಾರ್ಥಿಗಳು ದಾಂಡೇಲಿ ಪ್ರವಾಸ ಕೈಗೊಂಡು, ಅಲ್ಲಿನ ಪರಿಸರ ಸೌಂದರ್ಯ ಸವಿದು ಮುದಗೊಂಡರು. ಪ್ರವಾಸದಲ್ಲಿ ಉಪನ್ಯಾಸಕರಾದ ಪ್ರೊ. ಅಲ್ವಿನ್, ಪ್ರೊ. ಸಂಗಮೇಶ ಹಾದಿಮನಿ, ಪ್ರೊ. ನವಲೂರ್ ಮುಂತಾದವರು ಪಾಲ್ಗೊಂಡಿದ್ದರು.

## ಸಾಹಿತ್ಯ ಕ್ಷೇತ್ರಕ್ಕೆ ಕನಕದಾಸರ ಕೊಡುಗೆ ಅಪಾರ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮನುಕುಲಕ್ಕೆ ಶಾಶ್ವತ ಸತ್ಯ ಸಂದೇಶ ನೀಡಿ ಸಮಾಜದಲ್ಲಿ ಸಮಾನತೆಯೊಂದಿಗೆ ಏಳಿಗೆಗಾಗಿ ಶ್ರಮಿಸಿದ ಕೀರ್ತಿ ಭಕ್ತ ಕನಕದಾಸರಿಗೆ ಸಲ್ಲುತ್ತದೆ. ಕನಕದಾಸರ ತತ್ವಾದರ್ಶ, ಚಿಂತನೆಗಳು ಸಮಾಜಕ್ಕೆ ಸದಾ ದಾರಿದೀಪವಾಗಿವೆ ಎಂದು ತಾ.ಪಂ ಮಾಜಿ ಸದಸ್ಯ ನಿಂಗಪ್ಪ ಜಾಲವಾಡಗಿ ಹೇಳಿದರು.

ಅವರು ಗುರುವಾರ ಬಾಲೆಹೊಸೂರ ಗ್ರಾಮದಲ್ಲಿ ಕನಕದಾಸರ ಜಯಂತ್ಯುತ್ಸವದ ಅಂಗವಾಗಿ ಏರ್ಪಡಿಸಿದ್ದ ಕನಕದಾಸರ ಭಾವಚಿತ್ರ ಮೆರವಣಿಗೆ ವೇಳೆ ಮಾತನಾಡಿ, ಕನಕದಾಸರು ಜನಸಾಮಾನ್ಯರ ಭಾಷೆಯಲ್ಲಿ ದಾಸ ಸಾಹಿತ್ಯ, ಸಂಗೀತ, ವಚನದ ಮೂಲಕ ಸಮಾಜದ ಶ್ರೇಯೋಭಿವೃದ್ಧಿಗಾಗಿ ಸಮರ್ಪಿಸಿಕೊಂಡಿದ್ದರು. ಇಡೀ ಮಾನವ ಕುಲಕ್ಕೆ ಅವರು ಆದರ್ಶವಾಗಿದ್ದಾರೆ. ಸಮಾಜದ ಪ್ರಗತಿ ಮತ್ತು ದಾಸ ಸಾಹಿತ್ಯ ಕ್ಷೇತ್ರಕ್ಕೆ ಕನಕದಾಸರ ಕೊಡುಗೆ ಅಪಾರವಾಗಿದೆ ಎಂದರು.

ಈ ವೇಳೆ ಯಲ್ಲಪ್ಪ ಸೂರಣಗಿ, ಫಕ್ಕಿರೇಶ ಮ್ಯಾಟಣ್ಣವರ, ಬಸವರಾಜ ಗೂಳಣ್ಣವರ, ಪರಶುರಾಮ ಮೈಲಾರಿ, ಮಾಂತೇಶ ಈರಗಾರ, ಫಕ್ಕೀರಯ್ಯ ಹಿರೇಮಠ, ಮಾರುತಿ ಕೊಳಲ, ಜುಂಜಪ್ಪ ಮುದಿಯಮ್ಮನವರ, ದುರಗಪ್ಪ ಹುಲ್ಲೂರ, ಹನಮಂತಪ್ಪ ಸರಗುಣಕಿ, ಮಾರ್ತಂಡಪ್ಪ ಪೆದ್ದರ, ದೇವಣ್ಣ ಭಜಂತ್ರಿ, ಕುಬೇರ ಚಿಗರಿ, ಪರಸಣ್ಣ ಒಂಟಿ, ಗುಡದಯ್ಯ ದೇವರಮನಿ, ಜಗದೀಶ ಜೋಗೇರ, ರಾಜು ಬೆಂಚಳ್ಳಿ, ಮಾರುತಿ ಸತ್ಯಮ್ಮನವರ, ಕರಿಯಪ್ಪ ಸಾಂಧ್ಲಿ, ಸದ್ದಾಂ ಹಾಲಗಿ, ನಿಂಗಪ್ಪ ಜಟ್ಟಣ್ಣವರ, ಸಂಗಮೇಶ ತೇಲಿ ಸೇರಿ ಹಲವರಿದ್ದರು.

### ಸಂಸದರ ಅಮಾನತು ಖಂಡಿಸಿ ನಡೆದ ಪ್ರತಿಭಟನೆಯಲ್ಲಿ ಬಿಜೆಪಿ ವಿರುದ್ಧ ಸಚಿವ ತಂಗಡಗಿ ಆಕ್ರೋಶ

# ಹಿಟ್ಲರ್ ಆಡಳಿತ, ಸರ್ವಾಧಿಕಾರಿ ಧೋರಣೆ ಬಿಡಿ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕೇಂದ್ರ ಸರ್ಕಾರದ ಏಕಪಕ್ಷೀಯ ನೀತಿ, ಹಾಗೂ ಇತಿಹಾಸದಲ್ಲಿಯೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಂಸದರನ್ನು ಅಧಿವೇಶನದ ಸಮಯದಲ್ಲಿ ಅಮಾನತು ಮಾಡಿದ್ದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಶುಕ್ರವಾರ ಕೈ ಮುಖಂಡರು ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು.

ನಗರದ ಅಶೋಕ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು, ಕೆಲ ಹೊತ್ತು ರಸ್ತೆ ತಡೆದು ಕೇಂದ್ರ ಸರ್ಕಾರದ ನಡೆ ವಿರುದ್ಧ ಮತ್ತು ಬಿಜೆಪಿ ನಡೆ ಖಂಡಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಮಾತನಾಡಿ, ದೇಶ ಸ್ವಾತಂತ್ರ್ಯ ನಂತರದಲ್ಲಿ ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಿಪಕ್ಷ ಸಂಸದರನ್ನು ಹೊರಗಿಡುವ ಮೂಲಕ ತನ್ನ ಪ್ರಜಾಪ್ರಭುತ್ವ ವಿರೋಧಿ ನಡೆಯನ್ನು ಮುಂದುವರೆಸಿದೆ. ಈ ಮೂಲಕ ಕೇಂದ್ರ ಸರ್ಕಾರ ತನ್ನ ಹಲವು ಕಾಯ್ದೆಗಳನ್ನು ಏಕಪಕ್ಷಿಯವಾಗಿ ಜಾರಿಗೆ ತರಲು ಮುಂದಾಗಿದೆ,

ಭದ್ರತಾ ವೈಫಲ್ಯದಿಂದ ಸಂಸತ್ತಿನಲ್ಲಿ ದಾಳಿ ನಡೆದಿದೆ ಅದಕ್ಕೆ ಉತ್ತರಿಸಲು ಕೇಳಿದ ವಿರೋದ ಪಕ್ಷದ 145 ಸಂಸದರನ್ನು ಸಂಸತ್ತಿನಿಂದ ಹೊರ ಹಾಕಿದ್ದಾರೆ, ಇವರ ಉದ್ದೇಶ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡುವುದು. ಮತ್ತು ಸಂವಿಧಾನದ ಅಡಿಯಲ್ಲಿ ಕೆಲಸ ಮಾಡದೆ, ಹಿಟ್ಲರ್ ಆಡಳಿತ, ಸರ್ವಾಧಿಕಾರಿ ಧೋರಣೆ ಬಿಜೆಪಿ ಹಾಗೂ ಅಮಿತ್ ಶಾ ನೇತೃತ್ವದ ಬಿಜೆಪಿ ಸರ್ಕಾರ ಮಾಡುತ್ತಿದೆ ಎಂದು ಆಕ್ರೋಶ



ವ್ಯಕ್ತಪಡಿಸಿದರು.

ಜಿಲ್ಲಾ ಪಂಚಾಯತ ಮಾಜಿ ಅಧ್ಯಕ್ಷ ರಾಜಶೇಖರ ಹಿಟ್ನಾಳ ಮಾತನಾಡಿ, ಸಂಸತ್ತನ್ನು ರಕ್ಷಣೆ ಮಾಡದವರು ಜನರನ್ನು ಹೇಗೆ ರಕ್ಷಣೆ ಮಾಡುತ್ತಾರೆ. ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವವನ್ನು ಹೊಂದಿರುವ ಭಾರತ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡಿರುವ ಕೆಲಸವನ್ನು ಬಿಜೆಪಿ ಸರ್ಕಾರ ಮಾಡಿದೆ, ಇದನ್ನು ಇಡೀ ದೇಶದ ಜನ ಗಮನಿಸುತ್ತಿದ್ದಾರೆ ಇದಕ್ಕೆ ತಕ್ಕ ಉತ್ತರವನ್ನು ಕೊಡುತ್ತಾರೆ ಎಂದು ಹೇಳಿದರು.

ಶಾಸಕ ರಾಘವೇಂದ್ರ ಹಿಟ್ನಾಳ್ ಮಾತನಾಡಿ, ಸದನದಲ್ಲಿ ನಡೆದ ಈ ದುರ್ಘಟನೆಯನ್ನು ಪ್ರಧಾನಿ ಮೋದಿ ಕೇಂದ್ರ ರಕ್ಷಣಾ ಸಚಿವ ಅಮಿತ್ ಶಾ ದುರಾಡಳಿತದ ವೈಫಲ್ಯವನ್ನು ಎತ್ತಿ ತೋರುತ್ತಿದೆ. ಇದಲ್ಲದೆ ಈ ಹಿಂದೆ ನಡೆದ ಪುಲ್ವಾಮಾ ದಾಳಿ ಇಂತಹ ಘಟನೆಗಳನ್ನು ವಿರೋಧ ಪಕ್ಷದವರಾಗಿ ಖಂಡನೆ ಮಾಡುವ ಸಂದರ್ಭದಲ್ಲಿ ಅವಮಾನವೀಯವಾಗಿ ಸಂಸತ್ ಸದಸ್ಯರನ್ನು ಅಮಾನತು ಮಾಡಿ ಸದನದಿಂದ ಹೊರ ಹಾಕಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಅಹಂಕಾರ ಮತ್ಸರಗಳನ್ನು ತುಂಬಿರುವ ಕೇಂದ್ರ ಸರ್ಕಾರ ದೇಶದ ಜನರ ಮೇಲೆ ಇಡಿ, ಸಿಬಿಐ ಇನ್ನಿತರ ಮೂಲಗಳಿಂದ ಹಣಿಯುವಂತ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.

ಮಹಿಳಾ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜ್ಯೋತಿ ಗೊಂಡಬಾಳ ಮಾತನಾಡಿ, ದೇಶದಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ ಆಗುತ್ತಿದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಸಂವಿಧಾನವನ್ನು ಉಳಿಸಲು ಕಾಂಗ್ರೆಸ್ ಹೋರಾಟ ನಡೆಸುತ್ತಿದೆ ಬಿಜೆಪಿ ಸಂವಿಧಾನವನ್ನು ಕಗ್ಗೊಲೆ ಮಾಡುತ್ತೇವೆ ಎಂದು ಬಹಿರಂಗವಾಗಿ ಹೇಳಿಕೆಯನ್ನು ಕೊಟ್ಟಿದೆ. ಈಗ ಅದನ್ನು ಚಾಚು ತಪ್ಪದೆ ಮಾಡುತ್ತಿದೆ, ಸಂಸದರನ್ನು ಅಮಾನತುಗೊಳಿಸುವುದು ಅಷ್ಟೇ ಅಲ್ಲದೆ ಅವರ ಮೇಲೆ ಕ್ರಿಮಿನಲ್ ಕೇಸಿಗೆ ಸಂಬಂಧಿಸಿದ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ಸುರಕ್ಷಾ ಸಂಹಿತೆ, ಭಾರತೀಯ ಸಾಕ್ಷ ಸಂಹಿತೆ ಯಂತಹ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ಅವುಗಳಿಗೆ ಅನುಮೋದನೆ ಕೊಟ್ಟಿರುವುದು ನಮ್ಮ ದೇಶದ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಎದುರಾಗುವ ಲೋಕಸಭಾ ಚುನಾವಣೆಯಲ್ಲಿ ಜನರು ಬುದ್ಧಿ ಕಲಿಸಲಿದ್ದಾರೆ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೃಷ್ಣ ಇಟ್ಟಂಗಿ, ಮಹಿಳಾ ಘಟಕದ ಜಿಲ್ಲಾಧ್ಯಕ್ಷ ಮಾಲತಿ ನಾಯಕ್, ಅಲ್ಪಸಂಖ್ಯಾತ ಜಿಲ್ಲಾ ಘಟಕದ ಅಧ್ಯಕ್ಷ ಸಲೀಂ ಅಳವಂಡಿ, ಯುವ ಘಟಕದ ಜಿಲ್ಲಾಧ್ಯಕ್ಷ ಗವಿಸಿದ್ದನಗೌಡ ಪಾಟೀಲ್, ಎಸ್.ಸಿ. ಘಟಕದ ಅಧ್ಯಕ್ಷ ಗಾಳೆಪ್ಪ ಪೂಜಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ರೆಡ್ಡಿ ಗಲಬಿ, ನಗರ ಘಟಕ ಅಧ್ಯಕ್ಷ ಕಾಟನ್ ಪಾಶಾ, ಎಸ್. ಟಿ. ಘಟಕದ ತಾಲೂಕ ಅಧ್ಯಕ್ಷ ಮಂಜುನಾಥ ಜಿ. ಗೊಂಡಬಾಳ, ನಗರಸಭೆ ಸದಸ್ಯರಾದ ಮುತ್ತುರಾಜ ಕುಷ್ಟಗಿ, ಅಕ್ಬರ್ ಪಾಶಾ ಪಲ್ಟನ್, ಮುಖಂಡರಾದ ವಿಶಾಲಾಕ್ಷಿ ತಾವರಗೇರಾ, ಕಿಶೋರಿ ಬೂದನೂರು, ಶ್ರೀನಿವಾಸ್ ಪಂಡಿತ್, ರೇಷ್ಮಾ ಖಾಜಾವಲಿ, ಸವಿತಾ ಗೋರಂಟ್ಲಿ, ಸುಮಂಗಲಾ ನಾಯಕ, ರಮೇಶ ಗಿಣಗೇರಿ, ಮಾನ್ವಿ ಪಾಶಾ, ಶಿವಕುಮಾರ್ ಪಾವಲಿಶೆಟ್ಟರ್ ಇತರರು ಇದ್ದರು.

## ಬಿಸಿಯೂಟದೊಂದಿಗೆ ವಿಶೇಷ ಭೋಜನ



■ವಿಜಯಸಾಕ್ಷಿ ಸುದ್ದಿ, ಗದಗ

ಸಮೀಪದ ಅಡವಿಸೋಮಾಪೂರ ಸಣ್ಣ ತಾಂಡೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಅಕ್ಷರ ದಾಸೋಹ ಕಾರ್ಯಕ್ರಮ ಅಡಿಯಲ್ಲಿ ಮಧ್ಯಾಹ್ನದ ಬಿಸಿಯೂಟದೊಂದಿಗೆ ವಿಶೇಷವಾಗಿ ಮೆಂತ್ಯ, ಪಾಲಕ್ ಮಿಶ್ರಿತ ಚಪಾತಿ, ಗಜ್ಜರಿ ಹಲ್ವಾವನ್ನು ಶಾಲಾ ಮುಖ್ಯ ಶಿಕ್ಷಕ ಮಲ್ಲೇಶ ಡಿ.ಎಚ್. ಮಕ್ಕಳಿಗೆ ನೀಡಿದರು.

ಶಿಕ್ಷಕರಾದ ಎಸ್.ಜಿ. ಅಮ್ಮಿನಭಾವಿ, ಎಸ್.ಟಿ. ಹಳಕಟ್ಟಿ, ಪಿ.ಬಿ. ಕಿಲಬನವರ, ಶಾಲಾ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಮಾರುತಿ ಪವಾರ, ಗ್ರಾ.ಪಂ ಸದಸ್ಯ ವೆಂಕಟೇಶ್ ಲಮಾಣಿ, ಮುಖ್ಯ ಅಡುಗೆಯವರಾದ ಸಾವಿತ್ರಿ ರಾಠೋಡ, ದೇವಕ್ಕ ಲಮಾಣಿ, ಗಂಗವ್ವ ಲಮಾಣಿ, ರಾಮಣ್ಣ ಲಮಾಣಿ, ಸಕ್ಕುಬಾಯಿ ಲಮಾಣಿ ಮುಂತಾದವರಿದ್ದರು.

# ಒಗ್ಗಟ್ಟಿನಿಂದ ಬಾಳುವ ಮನೋಧರ್ಮ ಬೆಳೆಯಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೀಪ ಮನುಕುಲದ ಅಜ್ಞಾನ ಮತ್ತು ಅಂಧಕಾರವನ್ನು ಹೋಗಲಾಡಿಸಿ ಧರ್ಮದ ಬೆಳಕಿನೆಡೆಗೆ ಹಾಗೂ ಸನ್ಮಾರ್ಗದೆಡೆಗೆ ಸಾಗಿಸುವ ದಿವ್ಯ ಶಕ್ತಿಯಾಗಿದೆ ಎಂದು ಲಕ್ಷ್ಮೇಶ್ವರ ಕರೇವಾಡಿಮಠದ ಮಳೇಮಲ್ಲಿಕಾರ್ಜುನ ಸ್ವಾಮಿಗಳು ಹೇಳಿದರು.

ಅವರು ಪಟ್ಟಣದ ಮ್ಯಾಗೇರಿ ಓಣಿಯ ಬೀರೇಶ್ವರ ದೇವಸ್ಥಾನದ ಕಾರ್ತಿಕೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಕತ್ತಲೆ ಎಂಬ ಅಜ್ಞಾನ ಕಳೆದು ಸುಜ್ಞಾನದ ಬೆಳಕು ಮೂಡಿಸುವುದು ಕಾರ್ತಿಕೋತ್ಸವದ ಉದ್ದೇಶವಾಗಿದೆ. ಹಬ್ಬಗಳ ಆಚರಣೆಯಿಂದ ಜಾತಿ, ಮತ, ಪಂಥ ಎನ್ನದೇ ಎಲ್ಲರೂ ಒಗ್ಗಟ್ಟಿನಿಂದ



ಬಾಳುವ ಮನೋಧರ್ಮ ಬೆಳೆಸಿಕೊಳ್ಳಬೇಕು. ಯುವಕರು ದುಶ್ಚಟಗಳಿಗೆ ಬಲಿಯಾಗದೇ ಕ್ರೀಡೆ, ಸಂಗೀತ, ಜಾನಪದ ಕಲೆಗಳನ್ನು ರೂಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಬೀರೇಶ್ವರ ಟ್ರಸ್ಟ್ ಪ್ರತಿವರ್ಷ ಕಾರ್ತಿಕೋತ್ಸವ ನಿಮಿತ್ತ ಹಮ್ಮಿಕೊಳ್ಳುವ ಕಲಾ-ಸಾಂಸ್ಕೃತಿಕ ಕಾರ್ಯಕ್ರಮ ಶ್ಲಾಘನೀಯ ಎಂದರು.

ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ ಮಾತನಾಡಿ, ಜಾಣರ ಸಮೂಹ ಸೃಷ್ಟಿಸಿದ ಅನುಭವಿಕ ಅದ್ಭುತ ಸಾಹಿತ್ಯವೇ ಜಾನಪದವಾಗಿದೆ. ಹಾಲುಮತ ಸಮಾಜ ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರವಾಗಿದೆ. ಈ ಪರಂಪರೆಯನ್ನು ಯುವ ಸಮುದಾಯ ಮುಂದುವರೆಸಿಕೊಂಡು ಹೋಗಬೇಕು ಎಂದರು.

ಪಿ.ಆರ್. ಕುಲಕರ್ಣಿ, ಮಹೇಶ ಲಿಂಬಯ್ಯಸ್ವಾಮಿಮಠ, ನಾಗರಾಜ ಕೋರಿ, ವಿ.ಜಿ. ಪಡಗೇರಿ, ನಿಂಗಪ್ಪ ಬನ್ನಿ, ಹನಮಂತಪ್ಪ ಹುರಕಣವರ, ಮಂಜುನಾಥ ಘಂಟಿ, ಯಲ್ಲವ್ವ ದುರಗಣ್ಣವರ, ಭಾಗ್ಯಶ್ರೀ ಬಿ.ಎಲ್, ಮಹೇಶ ಹಾರೋಗೇರಿ, ನಾಗರತ್ನ ಕಡಾರಿ, ಯಲ್ಲಪ್ಪ ಸೂರಣಗಿ, ರಜಾಕ್ ಗಾಥಗೋಳಿ, ಗಂಗಪ್ಪ ದುರಣ್ಣವರ, ನಾಗರಾಜ ಚಿಂಚಲಿ, ದೇವಪ್ಪ ಬಟ್ಟೂರು, ಅಮರಪ್ಪ ಗುಡಗುಂಟಿ, ಸಿದ್ದಪ್ಪ ಪೂಜಾರ, ನೀಲಪ್ಪ ಶೇರಸೂರಿ, ಮಾಲತೇಶ ರಗಟಿ, ತಿಪ್ಪಣ್ಣ ಸಂಶಿ, ನಾಗರಾಜ ಮಡಿವಾಳರ ಸೇರಿ ಹಲವರಿದ್ದರು. ಕೊತಬಾಳದ ಅರುಣೋದಯ ಕಲಾ ತಂಡದಿಂದ ಜನಪದ ರಸಮಂಜರಿ ಕಾರ್ಯಕ್ರಮ ಜನಮನ ಸೆಳೆಯಿತು.

## ಬಸವಣ್ಣನವರು ಇಷ್ಟಲಿಂಗದ ಜನಕರು

▶▶ ಮೊದಲನೇ ಪುಟದಿಂದ

ಶ್ರೇಯಾ ಬಡಿಗೇರ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ವಹಿಸಿದ ಕೆ.ಎಸ್. ನಾಗರಾಜ ಹಾಗೂ ಸಹೋದರರರನ್ನು ಶ್ರೀಗಳು ಸಂಮಾನಿಸಿದರು.

ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ. ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

## ಶಾಲಾ ವಲಯದಲ್ಲಿ ರೋಡ್ ಬ್ರೇಕ್ ನಿರ್ಮಿಸಿ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಚೆನ್ನಮ್ಮ ವೃತ್ತದಿಂದ ಪುರ್ತಗೇರಿ ಕ್ರಾಸ್‌ವರೆಗಿನ ಹೆದ್ದಾರಿಯಲ್ಲಿ ವಾಹನಗಳ ದಟ್ಟಣೆಯಿಂದ ಜನತೆ, ಅದರಲ್ಲೂ ಶಾಲಾ ವಿದ್ಯಾರ್ಥಿಗಳು ಪ್ರಾಣಭಯದಲ್ಲಿ ರಸ್ತೆ ದಾಟಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಈ ರಸ್ತೆಯಲ್ಲಿ ರೋಡ್ ಬ್ರೇಕ್ ನಿರ್ಮಿಸಿ ಎಂದು ನಮ್ಮ ಕರ್ನಾಟಕ ಸೇನೆಯ ತಾಲೂಕಾ ಕಾರ್ಯಾಧ್ಯಕ್ಷ ಶಾಮೀದ್ ಮಾಲ್ದಾರ್ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬಾನಾಪೂರದಿಂದ ಗದ್ದನಕೇರಿ ಕ್ರಾಸ್‌ವರೆಗಿನ ರಾಷ್ಟ್ರೀಯ ಹೆದ್ದಾರಿಯು ಪಟ್ಟಣದ ಮಾರ್ಗವಾಗಿ ಸಾಗುತ್ತಿದ್ದು, ಪಟ್ಟಣದ ಚನ್ನಮ್ಮ ವೃತ್ತದಿಂದ ಪುರ್ತಗೇರಿ ಕ್ರಾಸ್‌ವರೆಗೆ ವಿಘ್ನೇಶ್ವರ



ವಿದ್ಯಾವರ್ಧಕ ಶಾಲೆ, ಸರ್ಕಾರಿ ಉರ್ದು ಶಾಲೆ, ಜ.ತೋಂಟದಾರ್ಯ ಶಾಲೆ, ತುಳಜಾಭವಾನಿ ಶಾಲೆ, ಸಿಬಿಎಸ್‌ಸಿ ಸೇರಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪ್ರಾಣಭಯದಲ್ಲಿ ರಾಷ್ಟ್ರೀಯ ಹೆದ್ದಾರಿ ದಾಟಬೇಕಿದೆ. ಹೀಗಾಗಿ ಚೆನ್ನಮ್ಮ ವೃತ್ತದಿಂದ ಪುರ್ತಗೇರಿ ಕ್ರಾಸ್‌ವರೆಗೆ ಕನಿಷ್ಠ 4ರಿಂದ 5 ರೋಡ್ ಬ್ರೇಕ್‌ಗಳೊಂದಿಗೆ ಶಾಲಾ ವಲಯದ ಫಲಕವನ್ನು ಸ್ಥಾಪಿಸಲು ಸಂಬಂಧಿಸಿದವರು ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

### ತೆಗ್ಗಿನಮಠ ಸಂಸ್ಥಾನದ ವಾರ್ಷಿಕೋತ್ಸವದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಅರಿವು ಜಾಗೃತವಾದಾಗಲೇ ಬದುಕು ಸುಂದರ


■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಪ್ರಾಚೀನ ತತ್ವ-ಸಿದ್ಧಾಂತ ಬಿಡದೇ ಸಮಾಜಕ್ಕೆ ಸ್ಪಂದಿಸಿ ಜನ ಮಾನಸಕ್ಕೆ ಸನ್ಮಾರ್ಗ ತೋರಿಸುವುದೇ ಸಾಧನೆಯ ಪರಮ ತಪಸ್ಸು. ಪ್ರಕೃತಿ ವಿಕಾಸವನ್ನು ಸೃಷ್ಟಿಸಿದರೆ, ಸಂಸ್ಕಾರ ಆದರ್ಶ ವ್ಯಕ್ತಿಗಳನ್ನು ಸೃಷ್ಟಿಸುತ್ತದೆ. ಉನ್ನತವಾದ ಗುರಿ ಮತ್ತು ಧ್ಯೇಯ ವ್ಯಕ್ತಿತ್ವ ವಿಕಾಸಕ್ಕೆ ದಾರಿದೀಪ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ತೆಗ್ಗಿನಮಠ ಸಂಸ್ಥಾನದಲ್ಲಿ ಜರುಗಿದ ಲಿಂ. ಚಂದ್ರಮೌಳೀಶ್ವರ ಶ್ರೀಗಳವರ 9ನೇ ವರ್ಷದ ಪುಣ್ಯಸ್ಮರಣೋತ್ಸವ ಹಾಗೂ ವರಸದ್ಯೋಜಾತ ಶ್ರೀಗಳ ಪಟ್ಟಾಧಿಕಾರದ 8ನೇ ವರ್ಷದ ವಾರ್ಷಿಕೋತ್ಸವ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಇಂದಿನ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಶ್ರೀ ಮಠದ ಪಟ್ಟಾಧ್ಯಕ್ಷರಾಗಿ 8 ವರುಷಗಳು ತುಂಬಿದ ಶುಭ ಸಂದರ್ಭದಲ್ಲಿ ಬೃಹತ್ ಶಿಕ್ಷಣ ಸಂಸ್ಥೆ ಮತ್ತು ಧಾರ್ಮಿಕ ಪವಿತ್ರ ಪರಂಪರೆಯ ಆದರ್ಶಗಳನ್ನು ಅತ್ಯಂತ ಕೌಶಲ್ಯದಿಂದ ಮುನ್ನಡೆಸಿಕೊಂಡು ಬರುತ್ತಿರುವುದು ಅತ್ಯಂತ ಸಂತೋಷ ಉಂಟುಮಾಡಿದೆ ಎಂದು ಹರುಷ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ ತೆಗ್ಗಿನಮಠ ಸಂಸ್ಥಾನದ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ವ್ಯಕ್ತಿ ಜೀವನದಲ್ಲಿ ಸುವರ್ಣ ಸಂಪಾದಿಸದಿದ್ದರೂ ಚಿಂತೆಯಿಲ್ಲ, ಸದ್ಗುಣಗಳನ್ನು ಸಂಪಾದಿಸಿಕೊಂಡು ಬಾಳಬೇಕು. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ನಿಯಮಗಳು ಸಾರ್ವಕಾಲಿಕವಾಗಿ ಶಾಶ್ವತವಾಗಿರುತ್ತವೆ. ಶಿಕ್ಷಣ, ಆರೋಗ್ಯ ಮತ್ತು ಅಭಿವೃದ್ಧಿ ವಿಚಾರಗಳಲ್ಲಿ ರಾಜಕೀಯ ಪ್ರವೇಶ ಒಳ್ಳೆಯದಲ್ಲ. ಬೆಳಗುವ ಜ್ಯೋತಿ ಜ್ಞಾನದ ಸಂಕೇತ. ಲಿಂ. ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮಿಗಳು ಬೆಂಗಾಡಿನಲ್ಲಿ ಶಿಕ್ಷಣ ಸಂಸ್ಥೆ ಸಂಸ್ಥಾಪಿಸಿ ಗ್ರಾಮೀಣ ಭಾಗದ ಮಕ್ಕಳ ಭವಿಷ್ಯಕ್ಕೆ ಕಾರಣರಾದರು. ಅವರ 9ನೇ ವರುಷದ ಪುಣ್ಯಾರಾಧನೆ ಸಮಾರಂಭದಲ್ಲಿ ತಾವುಗಳೆಲ್ಲರೂ ಆಗಮಿಸಿರುವುದು ಆತ್ಮ ಸಂತೃಪ್ತಿ ಉಂಟು ಮಾಡಿದೆ ಎಂದರು.



> ಮನುಷ್ಯನಲ್ಲಿ ಅರಿವು-ಮರೆವು ಎರಡೂ ಇರುತ್ತವೆ. ಅರಿವನ್ನು ಜಾಗೃತಗೊಳಿಸಿಕೊಂಡಾಗ ಮಾತ್ರ ಬದುಕು ಹಸನಾಗುತ್ತದೆ. ಖಾದಿ, ಖಾಕಿ ಮತ್ತು ಕಾವಿ ಜನಾಂಗವು ನಿರ್ಮಲ ಮನಸ್ಸಿನಿಂದ ಕಾಯಕ ಮಾಡಿದರೆ ಜನ ಕಲ್ಯಾಣದ ಜೊತೆಗೆ ಲೋಕ ಕಲ್ಯಾಣವಾಗುವುದು. ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಮುಖ್ಯ. ಅಕ್ಷರದ ಜ್ಞಾನವು ಅಕ್ಷಯದ ಜ್ಞಾನ ದೀವಿಗೆ ಎಂದು ತಿಳಿದ ಲಿಂ.ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮಿಗಳು ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೈದಿದ್ದಾರೆ ಎಂದು ರಂಭಾಪುರಿ ಶ್ರೀಗಳು ನುಡಿದರು.

ಸಮಾರಂಭ ಉದ್ಘಾಟಿಸಿದ ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ ಮಾತನಾಡಿ, ಶಿಕ್ಷಣ ಮತ್ತು ಸಾಮಾಜಕ ಕ್ಷೇತ್ರದಲ್ಲಿ ತೆಗ್ಗಿನಮಠ ಸಂಸ್ಥಾನದ ಕೊಡುಗೆ ಅಪಾರ. ಶ್ರೀಗಳವರು ಹುಟ್ಟು ಹಾಕಿದ ವಿದ್ಯಾ ಸಂಸ್ಥೆಗಳು ಇಂದು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಶ್ರೀಗಳವರ ಸಾಧನೆಗೆ ನಮ್ಮ ತಂದೆ ಲಿಂ. ಎಂ.ಪಿ. ಪ್ರಕಾಶ ಅವರು ಸಹಕರಿಸಿ ಬೆಳವಣಿಗೆಗೆ ಶ್ರಮಿಸಿದರೆಂಬ ಸ್ವಾಭಿಮಾನ ನನಗಿದೆ ಎಂದರು.

ತೆಗ್ಗಿನಮಠ ಸಂಸ್ಥಾನದ ಆಡಳಿತಾಧಿಕಾರಿ ಡಾ. ಟಿ.ಎಂ. ಚಂದ್ರಶೇಖರಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹಾವೇರಿ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಡಿವೈಎಸ್‌ಪಿ ವೆಂಕಟಪ್ಪ ನಾಯಕ, ಟಿ.ಎಂ. ಶಿವಕುಮಾರಸ್ವಾಮಿ, ಪಿ.ಬಿ. ಗೌಡ್ರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಮುರುಗೇಶ ಆರಾಧ್ಯ, ಡಾ. ಕೆ.ಎಂ. ಮಂಜುನಾಥ, ಸಿ.ಹೆಚ್.ಎಂ. ಗಂಗಾಧರ ವಿಶೇಷ ಆಹ್ವಾನಿತರಾಗಿದ್ದರು. ಡಾ. ಟಿ.ಎಂ. ನಟರಾಜ, ಟಿ.ಎಂ. ಚಂದ್ರಕಾಂತ, ಟಿ.ಎಂ. ಮಂಜೇಶ್ವರ ಅವರು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು.

ಎಮ್ಮಿಗನೂರು ಹಂಪಿ ಸಾವಿರದೇವರ ಮಠದ ವಾಮದೇವ ಮಹಾಂತ ಶಿವಾಚಾರ್ಯ ಸ್ವಾಮಿಗಳು ಶಿಕ್ಷಣ ಧರ್ಮ ಪೀಠಗಳ ಪರಂಪರೆ ಕುರಿತು ಉಪದೇಶಾಮೃತವನ್ನಿತ್ತರು. ಕವಲೇದುರ್ಗ ಭುವನಗಿರಿ ಸಂಸ್ಥಾನದ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧ್ಯಕ್ಷತೆ ವಹಿಸಿ ಶ್ರೀಗಳವರ ಕಾರ್ಯ ಶೈಲಿಯನ್ನು ಕೊಂಡಾಡಿದರು. ಕೊಟ್ಟೂರು ಕಟ್ಟಿಮನಿ ಹಿರೇಮಠದ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಸಿ.ಎಂ. ಕೊಟ್ರಯ್ಯ ಸ್ವಾಗತಿಸಿದರು. ಎನ್.ದ್ವಾರಕೀಶರೆಡ್ಡಿ ನಿರೂಪಿಸಿದರು.

## ರಾಷ್ಟ್ರೀಯ ಕೃಷಿಕರ ದಿನ ಆಚರಣೆ




■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ 'ರಾಷ್ಟ್ರೀಯ ಕೃಷಿಕರ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಿನ್ಸಿಪಾಲ ಡಾ. ಎಂ.ಎಂ. ಅವಟಿಯವರು ರೈತರು ಎದುರಿಸುತ್ತಿರುವ ನಾನಾ ಸಮಸ್ಯೆಗಳು, ಅವುಗಳ ಪರಿಹಾರದ ಬಗ್ಗೆ ಚರ್ಚಿಸಿದರು. ಆಧುನಿಕ ಯುಗದಲ್ಲಿ ಕೃಷಿಯನ್ನು ಹೇಗೆ ಲಾಭದಾಯಕ ಮಾಡುವುದು, ಕೃಷಿಯಲ್ಲಿ ತಂತ್ರಜ್ಞಾನ ಹೇಗೆ ಬಳಸಿಕೊಳ್ಳುವುದು ಇತ್ಯಾದಿ ವಿಷಯಗಳ ಕುರಿತು ಚಿಂತನ-ಮಂಥನ ಮಾಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಈರಣ್ಣ ಕೋರಚಗಾಂವ ಕಿಸಾನ್ ದಿವಸದ ಮಹತ್ವವನ್ನು ವಿವರಿಸಿದರು. ಪ್ರೊ. ಎಸ್.ಎಸ್. ಕಂದಗಲ್ಲ ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರ ಕಿರುಪರಿಚಯ ಮಾಡಿಕೊಟ್ಟರು. ಪ್ರೊ. ಮಲ್ಲಿಕಾರ್ಜುನ ಚೌಧರಿ ಚರಣ್ ಸಿಂಗ್ ರಚಿಸಿದ ಜಮೀನ್ದಾರಿ ಪದ್ಧತಿಯ ನಿರ್ನಾಮ, ಭಾರತದ ಬಡತನ ಮತ್ತು ಅದರ ಪರಿಹಾರ, ಜಾಯಿಂಟ್ ಫಾರ್ಮಿಂಗ್ ಪುಸ್ತಕಗಳ ಬಗ್ಗೆ ಮಾಹಿತಿ ನೀಡಿದರು.

ಪ್ರೊ. ಜಗದೀಶ ಶಿವನಗುತ್ತಿ ಮತ್ತು ಪ್ರೊ. ಸಂತೋಷಕುಮಾರ ಜಿ.ಎಮ್. ಅವರು ವಿದ್ಯಾರ್ಥಿಗಳಿಂದ 'ರಾಷ್ಟ್ರೀಯ ಕೃಷಿಕರ ದಿನ' ನಡಿಗೆಯನ್ನು ಆಯೋಜಿದ್ದರು. ಪ್ರೊ. ಮೃತ್ಯುಂಜಯ ಹೂಗಾರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ಪ್ರೊ. ಗೌತಮ ರೇವಣಕರ, ಪ್ರೊ. ದಯಾನಂದ ಗೌಡರ, ಪ್ರೊ. ಬಸವರಾಜ ಪಾಟೀಲ, ಪ್ರೊ. ಲೋಹಿತ ಜವಳಿ, ಪ್ರೊ. ಲೋಕೇಶ, ಪ್ರೊ. ಅಶ್ವಿನಿ ಅರಳಿ, ಪ್ರೊ. ಮಧುಸೂಧನ ಕುಲಕರ್ಣಿ, ಪ್ರೊ. ಶೈಲಜಾ ಮುದೇನಗುಡಿ, ಪ್ರೊ. ಪ್ರಸನ್ನ ನಾಡಗೌಡ, ಪ್ರೊ. ಸುನಿಲ ಪಾಟೀಲ್, ಪ್ರೊ. ವೀರೇಶ ಮಾಗಳದ, ಪ್ರೊ. ಮಹಾಂತ ಕಟ್ಟಿಮನಿ, ಪ್ರೊ. ಶಶಿಧರಗೌಡ ಮುಂತಾದವರಿದ್ದರು.

## ತಪ್ಪು ಮಾಹಿತಿ ನೀಡಬೇಡಿ: ಡಿಸಿ ಮನವಿ

■ ವಿಜಯಸಾಕ್ಷಿ ಸುದ್ದಿ, ಧಾರವಾಡ



ಡಿ.21ರಂದು ಕೆಲವು ಟಿ.ವಿ. ಮಾಧ್ಯಮಗಳಲ್ಲಿ ಮತ್ತು ಡಿ.22ರಂದು ಕೆಲವು ದಿನಪ್ರತಿಕೆಗಳಲ್ಲಿ ಧೃವ ಎಂಬ ಮಗುವಿಗೆ ಲಸಿಕೆ ನೀಡಿದ ನಂತರ ಮಗುವಿನ ಸಾವು ಸಂಭವಿಸಿದೆ ಎಂದು ವರದಿಯಾಗಿದ್ದು, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ವೇಳಾಪಟ್ಟಿಯ ಅನುಸಾರ ಮಗುವಿಗೆ ಡಿ.21ರಂದು ಲಸಿಕೆಗಳನ್ನು ನೀಡಿಲಾಗಿದೆ. ಮತ್ತು ಇದೇ ಲಸಿಕೆಗಳನ್ನು ಅದೇ ದಿನದಂದು ಬೇರೆ ಮಕ್ಕಳಿಗೂ ನೀಡಲಾಗಿದೆ. ಆ ಎಲ್ಲ ಮಕ್ಕಳು ಆರೋಗ್ಯದಿಂದ ಇದ್ದಾರೆ.

ಆದರೆ ಮಾಧ್ಯಮದಲ್ಲಿ ಧೃವ ಎಂಬ ಮಗು ಲಸಿಕೆ ನೀಡಿದ ನಂತರ ಮರಣ ಹೊಂದಿರುವದಾಗಿ ಬಿತ್ತರಿಸಿದ್ದು, ಸಾರ್ವಜನಿಕರಿಗೆ ತಪ್ಪು ಮಾಹಿತಿ ಪ್ರಸಾರವಾಗಿ ಲಸಿಕಾಕರಣದ ಕುರಿತು ತಪ್ಪು ಅಭಿಪ್ರಾಯ ಉಂಟಾಗಬಹುದು. ಮಕ್ಕಳನ್ನು ಮಾರಕ ರೋಗಗಳಿಂದ ರಕ್ಷಿಸಲು ರೋಗನಿರೋಧಕ ಶಕ್ತಿಯನ್ನು ವೃದ್ಧಿಸಲು ಈ ಲಸಿಕೆ ನೀಡಲಾಗುತ್ತದೆ. ಮಗುವಿನ ಮರಣದ ಕುರಿತಂತೆ ನಿಯಮಾನುಸಾರ ಸಮಿತಿಯಿಂದ ತನಿಖೆ ನಡೆಸಿ, ರಾಜ್ಯಮಟ್ಟಕ್ಕೆ ಸಲ್ಲಿಸಿ, ಅಲ್ಲಿಯೂ ನಿಯಮಾನುಸಾರ ಪರಿಶೀಲಿಸಿ ತದನಂತರ ಈ ಕುರಿತಂತೆ ಕಾರಣವನ್ನು ನಿರ್ಧರಿಸುತ್ತಾರೆ.

ಆದ ಕಾರಣ ಈ ಕುರಿತಂತೆ ನಿಖರ ಕಾರಣ ತಿಳಿಯದೇ ತಪ್ಪು ಮಾಹಿತಿಯನ್ನು ಮಾಧ್ಯಮಗಳು ಬಿತ್ತರಿಸದಿರಲು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಹನುಮ ಮಾಲಾಧಾರಿಗಳ ಶೋಭಾಯಾತ್ರೆ



■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ಹಾಗೂ ಹನುಮ ಮಾಲಾಧಾರಿಗಳ ಸೇವಾ ಸಮಿತಿಯ ಆಶ್ರಯದಲ್ಲಿ ಶುಕ್ರವಾರ ಸಂಜೆ ಶೋಭಾ ಯಾತ್ರೆ ನಡೆಯಿತು.

ಗ್ರಾಮದ ಪ್ರಮುಖ ಬೀದಿಯಲ್ಲಿ ಹನುಮಂತ ಮತ್ತು ಶ್ರೀರಾಮನ ಮೂರ್ತಿ ಮೆರವಣಿಗೆಯೊಂದಿಗೆ ನಡೆದ ಶೋಭಾಯಾತ್ರೆಯಲ್ಲಿ ಸುಮಾರು 100 ಜನ ಮಾಲಾಧಾರಿಗಳು ಭಾಗವಹಿಸಿದ್ದರು. ಇದಕ್ಕೂ ಪೂರ್ವ ಮಾರುತಿ ದೇವಸ್ಥಾನದಲ್ಲಿ ಬೆಳಿಗ್ಗೆ ರುದ್ರಾಭಿಷೇಕದೊಂದಿಗೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ನಂತರ ಅನ್ನ ಪ್ರಸಾದ ನೆರವೇರಿತು. ಹನುಮ ಮಾಲೆ ವ್ರತಾಚರಣೆಯನ್ನು ಡಿ.24ರಂದು ಮುಕ್ತಾಯಗೊಳಿಸಲಿದ್ದು, ಪಾದ ಯಾತ್ರೆಯ ಮೂಲಕ ಗಂಗಾವತಿ ತಾಲೂಕು ಆಂಜನಾದ್ರಿ ಪರ್ವತದಲ್ಲಿಯ ಆಂಜನೇಯ ದೇವಸ್ಥಾನದಲ್ಲಿ ಮಾಲೆಯನ್ನು ವಿಸರ್ಜನೆ ಮಾಡಲಾಗುತ್ತಿದೆ ಎಂದು ಸೇವಾ ಸಮಿತಿಯ ಸದಸ್ಯರು ತಿಳಿಸಿದರು.



■ ವಿಜಯಸಾಕ್ಷಿ ಸುದ್ದಿ, ಗದಗ

ರಾಯಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ವಾರ್ಷಿಕ ಕ್ರೀಡಾಕೂಟವನ್ನು ಏರ್ಪಡಿಸಲಾಗಿತ್ತು. ಶಾಲೆಯ ಆಡಳಿತಾಧಿಕಾರಿ ಎ.ಎಂ. ಡಾಲಾಯತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಆಟದ ಮಹತ್ವವನ್ನು ತಿಳಿಸಿದರು. ಮುಖ್ಯ ಶಿಕ್ಷಕರಾದ ಎಸ್. ಎಸ್. ಕುಂಬಾರ್ ಮಕ್ಕಳಿಗೆ ಕ್ರೀಡೆಯ ಮಹತ್ವವನ್ನು ತಿಳಿಸಿಕೊಟ್ಟರು. ಎನ್.ಎಂ. ಕಾಜಿ, ಆರ್.ಎ. ಅಣ್ಣಿಗೇರಿ ಪಾಲ್ಗೊಂಡಿದ್ದರು. ಶಿಕ್ಷಕರಾದ ಎಫ್.ಡಿ. ನದಾಫ್ ಸ್ವಾಗತಿಸಿದರು. ಅಂಜುಮ್ ಇ.ಟಿ. ವಂದಿಸಿದರು.

## ವಿಜ್ಞಾನ ವಿದ್ಯಾರ್ಥಿಗಳಿಗಾಗಿ ವಿಶೇಷ ಕಾರ್ಯಾಗಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಔದ್ಯೋಗಿಕ, ತಾಂತ್ರಿಕ, ವೈಜ್ಞಾನಿಕ ದೃಷ್ಟಿಯಿಂದ ಸ್ಪರ್ಧಾತ್ಮಕವಾಗಿ ಬೆಳೆಯುತ್ತೀ ರುವ ಇಂದಿನ ಶೈಕ್ಷಣಿಕ ಕ್ಷೇತ್ರದಲ್ಲಿ ಸಹಜವಾಗಿ ತಮ್ಮ ಮುಂದಿನ ಬದುಕು ಸಂಪದ್ಭರಿತವಾಗಬೇಕೆನ್ನುವ ಆಶೆಯಿಂದ ಬಹುಪಾಲು ವಿದ್ಯಾರ್ಥಿಗಳು ಇತ್ತೀಚಿನ ದಶಕಗಳಲ್ಲಿ ಹೆಚ್ಚಿನ ಪಾಲು ಇಂಜಿನಿಯರಿಂಗ್, ಮೆಡಿಕಲ್ ಕ್ಷೇತ್ರಕ್ಕೆ ಹೋಗಬೇಕೆನ್ನುವ ಉತ್ಸುಕತೆಯನ್ನು ಹೊಂದಿದ್ದಾರೆ. ಆದರೆ ಇತ್ತೀಚಿನ ಕೆಲವು ದಶಕಗಳಿಂದ ವಿದ್ಯಾರ್ಥಿಗಳು ಕೃಷಿ ಸಂಬಂಧಿತ ಪದವಿಗಳಾದ ಬಿ.ಎಸ್ಸಿ (ಅಗ್ರಿ), ಪಶು ಸಂಗೋಪನೆ, ಫಾರೆಸ್ಟ್ರಿ, ತೋಟಗಾರಿಕೆ ಮುಂತಾದ ಪದವಿಗಳಿಗೆ ಕಾಲಿಡುತ್ತಿರುವದು ಸಾಂಪ್ರದಾಯಿಕ ಭಾರತದ ಬೆಳವಣಿಗೆಗೆ ಒಂದು ಶುಭ ಸೂಚನೆ ಎಂದು ಭೀಮಾನಂದ ಪೋಳ ಅಭಿಪ್ರಾಯಪಟ್ಟರು.

ನಗರದ ಸನ್ಮಾರ್ಗ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ವಿಶೇಷ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.



ಕಾಲೇಜಿನ ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ ಮಾತನಾಡಿ, ಪೋಳ ಅವರು ತಿಳಿಸಿದ ಮಾಹಿತಿಯನ್ನು ವಿದ್ಯಾರ್ಥಿಗಳು ಸ್ಪಷ್ಟವಾಗಿ ಅರಿತುಕೊಂಡು ತಮ್ಮ ಭವಿಷ್ಯವನ್ನು ಉಜ್ವಲ ಮಾಡಿಕೊಳ್ಳಬೇಕೆಂದರು. ಕಾರ್ಯಾಗಾರದಲ್ಲಿ ಆಡಳಿತಾಧಿಕಾರಿ ಎಮ್.ಸಿ. ಹಿರೇಮಠ, ಆಡಳಿತ ಮಂಡಳಿಯ ಸದಸ್ಯರಾದ ಪ್ರೊ. ರೋಹಿತ್ ಒಡೆಯರ್, ಪ್ರೊ. ಉಡುಪಿ ದೇಶಪಾಂಡೆ, ಪ್ರೊ. ಸೈಯದ್ ಮತೀನ್ ಮುಲ್ಲಾ, ಪ್ರೊ. ರಾಹುಲ್ ಒಡೆಯರ್ ಹಾಗೂ ವಿಜ್ಞಾನ ವಿಭಾಗದ ಉಪನ್ಯಾಸಕರು ಪಾಲ್ಗೊಂಡಿದ್ದರು.

## ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಗೆ ಧಾರವಾಡದ ತಂಡ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಕಳೆದ ಅಕ್ಟೋಬರ 8ರಿಂದ 12ರವರೆಗೆ ಕೊಡಗಿನಲ್ಲಿ ಜರುಗಿದ 14 ವರ್ಷ ವಯೋಮಿತಿಯ ಬಾಲಕಿಯರ ರಾಜ್ಯಮಟ್ಟದ ಹಾಕಿ ಪಂದ್ಯಾವಳಿಯಲ್ಲಿ ಧಾರವಾಡ ಜಿಲ್ಲಾ ಕ್ರೀಡಾ ಶಾಲೆಯ ಹಾಕಿ ಕ್ರೀಡಾಪಟುಗಳು ಪ್ರಥಮ ಸ್ಥಾನ ಪಡೆದು, ಮಧ್ಯಪ್ರದೇಶ ರಾಜ್ಯದ ಗ್ವಾಲೀಯರ್‌ನಲ್ಲಿ ಡಿಸೆಂಬರ್ 28ರಿಂದ ಆಯೋಜಿಸಿರುವ ರಾಷ್ಟ್ರಮಟ್ಟದ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ.

ರಾಷ್ಟಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿರುವ ಕ್ರೀಡಾಪಟುಗಳನ್ನು ಶನಿವಾರ ನಡೆದ ಜಿಲ್ಲಾ ಜನತಾ ದರ್ಶನ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಕ್ರೀಡಾ ಪರಿಕರಗಳ ಕಿಟ್ ನೀಡಿ, ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ




ಗುರುದತ್ತ ಹೆಗಡೆ, ಜಿ.ಪಂ ಸಿಇಓ ಸ್ವರೂಪ ಟಿ.ಕೆ., ಎಸ್.ಪಿ. ಡಾ.ಗೋಪಾಲ ಬ್ಯಾಕೊಡ, ಮಹಾನಗರ ಪಾಲಿಕೆ ಆಯುಕ್ತ ಡಾ. ಈಶ್ವರ ಉಳ್ಳಾಗಡ್ಡಿ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸದಾನಂದ ಅಮರಾಪೂರ, ಹಾಕಿ ತರಬೇತುದಾರ ಚಂದ್ರಶೇಕರ ನಾಯ್ಕರ್, ವ್ಯವಸ್ಥಾಪಕ ಎಸ್.ಜಿ. ಭಾವಿಕಟ್ಟಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪೂಜಾ ಧಾರವಾಡ, ಶೃತಿ ಪೂಜಾರಿ, ರಾಜೇಶ್ವರಿ ಬೂದನ್ನವರ, ಶಿಲ್ಪಾ ಕಣಜನವರ, ಪ್ರೀತಿ ನಿಲಗಡ್ಡಿ, ಸಂಜನಾ ಹುಗ್ಗೆಣ್ಣವರ, ಬಸಮ್ಮಾ ಹುಗ್ಗೆಣ್ಣವರ, ಸುಕನ್ಯಾ ಜಕ್ಕಣ್ಣವರ, ನಿಶ್ಚಿತ ನಾಯ್ಕರ್, ಸೌಂದರ್ಯಾ ಲಮಾಣಿ ರಾಷ್ಟಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳಾಗಿದ್ದಾರೆ.

## ರೈತರ ಸಮಸ್ಯೆಗಳ ಪರಿಹಾರಕ್ಕೆ ಮಧ್ಯಪ್ರವೇಶಿಸಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ದೇಶದಲ್ಲಿ ರೈತರ ಸ್ಥಿತಿ ಚಿಂತಾಜನಕವಾಗಿದೆ. ಸಾಲದ ಹೊರೆಯು ರೈತರನ್ನು ಆತ್ಮಹತ್ಯೆಯ ಅಂಚಿಗೆ ತಳ್ಳುತ್ತಿದೆ. ಸರಕಾರ ಕೂಡ ರೈತ ಕಾಯ್ದೆಯ ಹೆಸರಿನಲ್ಲಿ ರೈತ ವಿರೋಧಿ ಕಾಯ್ದೆ ತಂದು ರೈತರ ಬದುಕು ಇನ್ನಷ್ಟು ಸಂಕಷ್ಟಕ್ಕೆ ಸಿಲುಕುತ್ತಿದೆ. ಈ ಗಂಭೀರ ಸಮಸ್ಯೆಗಳನ್ನು ಬಗೆಹರಿಸಲು ಮಾನ್ಯ ರಾಷ್ಟ್ರಪತಿಗಳು ಹಸ್ತಕ್ಷೇಪ




ಮಾಡಬೇಕೆಂದು ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾದ ಕರ್ನಾಟಕ ರಾಜ್ಯ ಘಟಕ ಜಿಲ್ಲೆಯ ಎಲ್ಲಾ ಕೇಂದ್ರಗಳಲ್ಲಿ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಿದೆ ಎಂದು ರಾಜ್ಯಾಧ್ಯಕ್ಷ ಅಡ್ವಕೇಟ್ ತಾಹೇರ್ ಹುಸೇನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಮ್ಮದು ಕೃಷಿ ಪ್ರಧಾನವಾದ ದೇಶ. ದೇಶದ ಶೇ.80ರಷ್ಟು ಜನಸಂಖ್ಯೆ ಈಗಲೂ ಕೃಷಿಯ ಮೇಲೆ ಅವಲಂಬಿತರಾಗಿದೆ. ವರದಿಯ ಪ್ರಕಾರ ಇಂದು ದೇಶದಲ್ಲಿ ದಿನಕ್ಕೆ 30 ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. 2014ರಿಂದ 2022ರ ಅವಧಿಯಲ್ಲಿ ಸುಮಾರು 14,074 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಅತ್ಯಂತ ಗಂಭೀರವಾದ ವಿಚಾರವಾದರೂ ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ರಾಷ್ಟ್ರಪತಿಗಳು ಕೂಡಲೇ ಮಧ್ಯಪ್ರವೇಶಿಸಿ, ರೈತರ ಈ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಬೇಕು ಎಂದು ಅವರು ಹೇಳಿದ್ದಾರೆ.


## ಭಕ್ತ ಕನಕದಾಸ ಜಯಂತಿ ಆಚರಣೆ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ತಿಮ್ಮಾಪೂರ ಗ್ರಾಮದಲ್ಲಿ ಡಿ.24ರಂದು ಶ್ರೀ ಭಕ್ತ ಕನಕದಾಸರ 536ನೇ ಜಯಂತ್ಯುತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಅವರು ಶ್ರೀ ಕನಕದಾಸರ ಭವ್ಯ ಮೆರವಣಿಗೆಗೆ ಚಾಲನೆ ನೀಡುವರು. ಶ್ರೀ ಚೌಕಿ ಬಸವೇಶ್ವರ ದೇವಸ್ಥಾನದಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಂಚರಿಸಲಿದ್ದದು, ಈ ಮೆರವಣಿಗೆಯಲ್ಲಿ ಮಹಿಳೆಯರಿಂದ ಕುಂಭ ಮೇಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಾಯೋಜಿತ ಗೊಂಡ ಕೊಣ್ಣೂರಿನ ಶ್ರೀಚಕ್ರ ಮಹಿಳಾ ಡೊಳ್ಳಿನ ಮೇಳ ಮತ್ತು ಜನಪದ ಕಲಾತಂಡಗಳು ಭಾಗವಹಿಸಲಿವೆ ಎಂದು ಟ್ರಸ್ಟ್ ಕಮಿಟಿಯ ಪ್ರಕಟಣೆ ತಿಳಿಸಿದೆ.

## ಶರಣ ಮಾದರ ಚೆನ್ನಯ್ಯನವರ ಜಯಂತಿ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ಡಿ.24ರ ಬೆಳಿಗ್ಗೆ 11ಕ್ಕೆ ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ನಡೆಯಲಿರುವ ಬಸವದಳದ 1573ನೇ ಶರಣ ಸಂಗಮದಲ್ಲಿ ಶರಣ ಮಾದರ ಚನ್ನಯ್ಯನವರ ಜಯಂತಿ ಹಾಗೂ ಬಸವಾದಿ ಶರಣರ ವಚನಗಳ ಹಿರಿಮೆ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷ ಶರಣ ವಿ.ಕೆ. ಕರೇಗೌಡ್ರ ವಹಿಸುವರು. ಶರಣೆ, ಶರಣ ತತ್ವ ಚಿಂತಕಿ ಜಿ.ಎನ್. ಬಡಿಗಣ್ಣವರ ಉಪನ್ಯಾಸ ಮಾಡುವರು. ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಿಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

### 'ಕಲ್ಲಂಗಡಿ ಬೆಳೆ ಕ್ಷೇತ್ರೋತ್ಸವ' ಕಾರ್ಯಕ್ರಮದಲ್ಲಿ ಶಾಸಕ ಡಾ. ಚಂದ್ರು ಲಮಾಣಿ

# ಕೃಷಿಯೂ ಒಂದು ವಿಧದ ವಿಜ್ಞಾನ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೇಶದ ಅಭಿವೃದ್ಧಿಯಲ್ಲಿ ರೈತರ ಪಾತ್ರ ಅತ್ಯಮೂಲ್ಯವಾಗಿದ್ದು ರೈತರು ಸರ್ಕಾರದ ಯೋಜನೆಗಳ ಸದ್ವಿನಿಯೋಗದೊಂದಿಗೆ ಕೃಷಿಯಲ್ಲಿ ಹೊಸ ತಂತ್ರಜ್ಞಾನ, ಇಸ್ರೇಲ್ ಮಾದರಿ ಕೃಷಿ ಅಳವಡಿಸಿಕೊಂಡು ಆರ್ಥಿಕ ಸ್ವಾವಲಂಬನೆ ಹೊಂದಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಶನಿವಾರ ಪಟ್ಟಣದ ಬಸವರಾಜ ಮರಿಬಸಪ್ಪ ಶಿರಹಟ್ಟಿ ಅವರ ತೋಟದಲ್ಲಿ ಜಿ.ಪಂ, ತಾ.ಪಂ ಮತ್ತು ತಾಲೂಕಾ ತೋಟಗಾರಿಕೆ ಇಲಾಖೆ ಆಶ್ರಯದಲ್ಲಿ ರೈತರಿಂದ-ರೈತರಿಗಾಗಿ 2023-24ನೇ ಸಾಲಿನಲ್ಲಿ ಪ್ರಚಾರ ಮತ್ತು ಸಾಹಿತ್ಯ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ 'ಕಲ್ಲಂಗಡಿ ಬೆಳೆ ಕ್ಷೇತ್ರೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು ಎನ್ನುವಂತೆ ಕೃಷಿಯೂ ಒಂದು ವಿಜ್ಞಾನ. ಇಲ್ಲಿ ಸಂಶೋಧನೆ ನಿತ್ಯ ನೂತನವಾಗಿದೆ. ಬರಗಾಲ, ಅತಿವೃಷ್ಟಿ, ಹವಾಮಾನ ವೈಪರಿತ್ಯ, ರೋಗಬಾಧೆ, ಬೆಳೆಹಾನಿ ಎಲ್ಲವನ್ನೂ ಎದುರಿಸಿ ಕೃಷಿಯನ್ನು ಲಾಭದಾಯಕವಾಗಿಸಿಕೊಳ್ಳುವುದು ರೈತರಿಗೆ ಸವಾಲಾಗಿದೆ. ಈ ಹಿನ್ನೆಲೆಯಲ್ಲಿ ರೈತರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಲವಾರು ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿವೆ.




ತೋಟಗಾರಿಕೆಯಲ್ಲಿ ಕಡಿಮೆ ಅವಧಿ, ಅಲ್ಪ ನೀರಿನಲ್ಲಿ ಹೂವು, ಹಣ್ಣು, ತರಕಾರಿ ಸೇರಿದಂತೆ ಹೊಸ ತಳಿಯ ಕಲ್ಲಂಗಡಿಯಂತಹ ಬೆಳೆಗಳನ್ನು ಬೆಳೆಯಬೇಕು. ತೋಟಗಾರಿಕೆ ಇಲಾಖೆಯಲ್ಲಿ ರೈತರಿಗಾಗಿ ಇರುವ ಯೋಜನೆಗಳ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಬೇಕು. ಸರ್ಕಾರದ ಯೋಜನೆಗಳು ರೈತರಿಗೆ ತಲುಪುವಲ್ಲಿ ತೊಂದರೆಯಾಗಿದ್ದರೆ ನನ್ನ ಗಮನಕ್ಕೆ ತನ್ನಿ. ಸಂಬಂಧಪಟ್ಟ ಇಲಾಖೆಯ ಸಚಿವರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ರೈತರಿಗೆ ಅನುಕೂಲ ಕಲ್ಪಿಸುವುದಾಗಿ ಹೇಳಿದರು.

ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಸುರೇಶ ಕುಂಬಾರ, ರೈತರಿಗೆ ಸರ್ಕಾರದ ಯೋಜನೆಗಳು, ಸಬ್ಸಿಡಿ, ಇಸ್ರೇಲ್ ತಂತ್ರಜ್ಞಾನ, ಹೊಸ ಮಾದರಿ ಮತ್ತು ಹೊಸ ತಳಿ ಬೆಳೆಯ ಬಗ್ಗೆ ಮಾಹಿತಿ ನೀಡಿದರು. ಕ್ಷೇತ್ರದಲ್ಲಿ ಹನಿ ನೀರಾವರಿ ಮತ್ತು ಮಲ್ಚಿಂಗ್ ವ್ಯವಸ್ಥೆಯಲ್ಲಿ ಕಲ್ಲಂಗಡಿ ಬೆಳೆದ ಅನೇಕ ರೈತರು ಕಡಿಮೆ ಅವಧಿಯಲ್ಲಿ ಹೆಚ್ಚು ಆದಾಯ ಪಡೆದುಕೊಂಡಿರುವದು ಉತ್ತಮ ಬೆಳವಣಿಗೆ ಎಂದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ರೈತ ದಿನಾಚರಣೆ ಅಂಗವಾಗಿ ತೋಟಗಾರಿಕೆ ಕೃಷಿಯಲ್ಲಿ ವಿಶೇಷ ಕಾರ್ಯ ಸಾಧನೆ ಮಾಡಿದ ಹಲವು ರೈತರನ್ನು ಗೌರವಿಸಲಾಯಿತು.

3 ಎಕರೆ ತೋಟದಲ್ಲಿ ಬೋರ್‌ವೆಲ್‌ನಿಂದ ಹನಿ ನೀರಾವರಿ, ಮಲ್ಚಿಂಗ್ ವ್ಯವಸ್ಥೆ ಅಳವಡಿಸಿ ಹೊಸ ತಳಿಯ ಕಲ್ಲಂಗಡಿ ಬೆಳೆದಿದ್ದೇನೆ. ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ಸಹಾಯ-ಸಹಕಾರ-ಸಲಹೆಯೊಂದಿಗೆ ಕೇವಲ 3 ತಿಂಗಳ ಅವಧಿಯಲ್ಲಿ ಐದಾರು ಲಕ್ಷ ರೂ. ಆದಾಯ ಕಲ್ಲಂಗಡಿ ಬೆಳೆಯಿಂದ ಸಿಕ್ಕಿರುವುದು ಖುಷಿ ಕೊಟ್ಟಿದೆ. ಅಲ್ಲದೇ ಬರಗಾಲದಿಂದ ಒಣ ಬೇಸಾಯದಲ್ಲಾದ ನಷ್ಟಕ್ಕೊಂದಿಷ್ಟು ಆಸರೆಯಾಗಿ ಕೃಷಿ ಮೇಲಿನ ಆಸಕ್ತಿ, ಪ್ರೀತಿ ಹಸಿರಾಗಿದೆ. ನೀರಾವರಿ ಹೊಂದಿರುವ ರೈತರು ಸಾಂಪ್ರದಾಯಿಕ ಬೆಳೆಯ ಬದಲಾಗಿ ಇಸ್ರೇಲ್ ಮಾದರಿಯಲ್ಲಿ, ಕಡಿಮೆ ಅವಧಿಯಲ್ಲಿ ಹೆಚ್ಚು ಲಾಭ ತರುವ ಕೃಷಿ ಅಳವಡಿಸಿಕೊಳ್ಳಬೇಕು.

**- ಬಸವರಾಜ ಶಿರಹಟ್ಟಿ.**
**ಕಲ್ಲಂಗಡಿ ಬೆಳೆಗಾರ.**

ಪ್ರಗತಿಪರ ರೈತರರಾದ ಬಸವರಾಜ ಬೆಂಡಿಗೇರಿ, ಚನ್ನಪ್ಪ ಶೀರನಹಳ್ಳಿ, ಎಂ.ಬಿ. ಹಳ್ಳಿ, ಬಸವರಾಜ ಬೆಂಗಳೂರ, ಈರಣ್ಣ ಬಡ್ನಿ, ಬಸವರಾಜ ಶಿರಹಟ್ಟಿ, ಬಸವರಾಜ ಆದಿ, ಪ್ರಸಾದ ಆಡಿನ್, ಕುತ್ಬುದ್ದಿನ್ ಕಣಕೆ, ಎ.ಜಿ. ಸೂರಣಗಿ ಹಾಗೂ ಇಲಾಖೆಯ ಸಿಬ್ಬಂದಿಗಳು ಇದ್ದರು.

# ಜಿಲ್ಲಾ ಮಟ್ಟದ ಜನತಾ ದರ್ಶನ; 177 ಅಹವಾಲು ಸ್ವೀಕಾರ



■ವಿಜಯಸಾಕ್ಷಿ ಸುದ್ದಿ, ಧಾರವಾಡ

ಧಾರವಾಡ ಜಿಲ್ಲಾಡಳಿತದಿಂದ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಶನಿವಾರ ಬೆಳಿಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರ ಅಧ್ಯಕ್ಷತೆಯಲ್ಲಿ ಜನತಾದರ್ಶನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಜಿಲ್ಲೆಯ ವಿವಿಧ ಸ್ಥಳಗಳಿಂದ ಆಗಮಿಸಿದ್ದ ಸಾರ್ವಜನಿಕರು ಸಚಿವರಿಗೆ ಸುಮಾರು 177 ಅಹವಾಲುಗಳನ್ನು ಸಲ್ಲಿಸಿದರು.

ಇವುಗಳಲ್ಲಿ ಹೆಸ್ಕಾಂ-7, ಉದ್ಯೋಗ ಇಲಾಖೆ-3, ಸಹಕಾರಿ ಇಲಾಖೆ-3, ಸಾರಿಗೆ ಇಲಾಖೆ-3, ವಸತಿ ಇಲಾಖೆ-7, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ-10, ಕಾರ್ಮಿಕ ಇಲಾಖೆ-5, ಶಾಲಾ ಶಿಕ್ಷಣ ಇಲಾಖೆ-10, ಲೋಕೋಪಯೋಗಿ ಇಲಾಖೆ-2, ಸಮಾಜ ಕಲ್ಯಾಣ ಇಲಾಖೆ-3, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ-3, ಪೌರಾಡಳಿತ ಮತ್ತು ನಗರಾಭಿವೃದ್ಧಿ ಇಲಾಖೆ-4, ಆರೋಗ್ಯ ಇಲಾಖೆ-3, ಕ್ರೀಡಾ ಇಲಾಖೆ-3, ಅಲ್ಪಸಂಖ್ಯಾತರ ಇಲಾಖೆ-1, ಗೃಹ ಇಲಾಖೆ-3, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ-2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ-3, ಮಹಾನಗರಪಾಲಿಕೆ-44, ನೋಂದಣಿ ಇಲಾಖೆ-1, ಕಂದಾಯ ಇಲಾಖೆ-54 ಸೇರಿದಂತೆ ಒಟ್ಟು 177 ಅಹವಾಲುಗಳನ್ನು ಸಚಿವರು ಸ್ವೀಕರಿಸಿದರು.

ಈ 177 ಅಹವಾಲುಗಳಲ್ಲಿ ತಾಲೂಕುವಾರು ಅಣ್ಣಿಗೇರಿ-3, ಧಾರವಾಡ-86, ಹುಬ್ಬಳ್ಳಿ ನಗರ-33, ಹುಬ್ಬಳ್ಳಿ ಗ್ರಾಮೀಣ-16, ಅಳ್ನಾವರ-2, ಕಲಘಟಗಿ-16, ಕುಂದಗೋಳ-8 ಮತ್ತು ನವಲಗುಂದದಿಂದ 13 ಅಹವಾಲುಗಳು ಸಲ್ಲಿಕೆಯಾಗಿವೆ.

### ಗೊಜನೂರಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕಸಾಪ 'ಚಿಣ್ಣರ ಚಾವಡಿ'

# ಓದಿನಿಂದ ಮಾನವೀಯ ಮೌಲ್ಯಗಳ ವೃದ್ಧಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಾಲೆಯಲ್ಲಿ ಮಕ್ಕಳು ಪಠ್ಯ ಶಿಕ್ಷಣದೊಂದಿಗೆ ಕಥೆ, ಕಾಂದಂಬರಿ, ಜಾನಪದ, ಪದ್ಯ ಓದುವುದರಿಂದ ಮಾನಸಿಕ ಬೆಳವಣಿಗೆ, ಸ್ವ-ಅನುಭವ, ಕಲ್ಪನಾಶಕ್ತಿ ಮತ್ತು ಭಾಷಾ ಪ್ರೌಢಿಮೆ, ವಿಷಯ ಜ್ಞಾನ ವೃದ್ಧಿಯಾಗುತ್ತದೆ ಎಂದು ಕೆಎಎಸ್ ಅಧಿಕಾರಿ, ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕ ನಿಜಲಿಂಗಪ್ಪ ತೋಟದ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಶನಿವಾರ ತಾಲೂಕಾ ಕಸಾಪ ಲಕ್ಷ್ಮೇಶ್ವರ ವತಿಯಿಂದ ಗೊಜನೂರಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಮ್ಮಿಕೊಂಡ ಕರ್ನಾಟಕ ನಾಮಕರಣದ ಸುವರ್ಣ ಸಂಭ್ರಮ ಕಾರ್ಯಕ್ರಮ ಮಾಲಿಕೆಯ 'ಚಿಣ್ಣರ ಚಾವಡಿ' ಕಾರ್ಯಕ್ರಮದಲ್ಲಿ ಪರಿಷತ್ತಿನ ಶಾಲಾ ವಿದ್ಯಾರ್ಥಿ ಘಟಕ ಉದ್ಘಾಟಿಸಿ ಮಾತನಾಡಿದರು.

ಕಸಾಪ ವಿದ್ಯಾರ್ಥಿ ಘಟಕದ ನೂತನ ಪದಾಧಿಕಾರಿಗಳಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿದ ಪ್ರಾಚಾರ್ಯ ಎನ್.ಕೆ. ಹತ್ತಿಕಾಳ, ನಮ್ಮ ತಾಲೂಕಿನ ಅಕ್ಕಿಗುಂದದಂತಹ ಚಿಕ್ಕ ಗ್ರಾಮದ ಸಾಮಾನ್ಯ ಕುಟುಂಬದ ನಿಜಲಿಂಗಪ್ಪ ತೋಟದ ಇಂದು ಕೆಎಎಸ್ ಅಧಿಕಾರಿಯಾಗಿ ಉನ್ನತ ಗೌರವ ಪಡೆಯುತ್ತಾರೆ ಎಂದರೆ ಅದಕ್ಕೆ ಶಿಕ್ಷಣವೇ ಕಾರಣ ಎಂದರು.

ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ ಮಾತನಾಡಿ, ಲಕ್ಷ್ಮೇಶ್ವರ ತಾಲೂಕಾ ಕಸಾಪ ಚಟುವಟಿಕೆಗಳನ್ನು ಗ್ರಾಮ ಮಟ್ಟದಲ್ಲಿಯೂ ಹಮ್ಮಿಕೊಳ್ಳಲಾಗುತ್ತಿದೆ. ಕನ್ನಡ ಮತ್ತು ಕನ್ನಡತನದ ಸಂಸ್ಕೃತಿಯನ್ನು ಶಾಲಾ ಹಂತದಲ್ಲಿಯೇ ಬೆಳೆಸಲು ರಾಜ್ಯದಲ್ಲಿಯೇ ವಿಶೇಷ ಪ್ರಯೋಗವಾಗಿ ತಾಲೂಕು ಘಟಕದ ವತಿಯಿಂದ ಶಾಲೆಗಳಲ್ಲಿ ವಿದ್ಯಾರ್ಥಿ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ ಎಂದರು.




ಕನ್ನಡ ಶಿಕ್ಷಕ, ಸಾಹಿತಿ ಶಿವಾನಂದ ಮಾಯಪ್ಪನವರ 'ಚಿಣ್ಣರ ಚಾವಡಿ' ನಿರ್ವಹಿಸಿದರು. 10 ವಿದ್ಯಾರ್ಥಿಗಳು ತಂಡಗಳಾಗಿ ಭಾಗವಹಿಸಿ ಪರಿಣಾಮಕಾರಿಯಾಗಿ ವಿಷಯ ಮಂಡಿಸಿದರು. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತಂದೆಯ ಪಾತ್ರ ಹೆಚ್ಚೋ, ತಾಯಿಯ ಪಾತ್ರ ಹೆಚ್ಚೋ? ಎಂಬ ವಿಷಯದ ಮೇಲೆ ಚಿಣ್ಣರ ವಿಚಾರ ಕಲರವ ಏರ್ಪಡಿಸಲಾಗಿತ್ತು. ತಂದೆ ಜನಕ-ತಾಯಿ ಆಮ್ಲಜನಕ. ಇಬ್ಬರೂ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಸಮಾನ ಪಾತ್ರ ನಿರ್ವಹಿಸುತ್ತಾರೆ ಎಂಬುದನ್ನು ಮಕ್ಕಳಿಗೆ ಅರ್ಥೈಸಲಾಯಿತು. ಶಿಕ್ಷಕರಾದ ಕೆ.ಪಿ. ಪಾಟೀಲ, ಕವಿತಾ ಕಂಚಗಾರ, ನಾಗರಾಜ ಪೂಜಾರ ಕಾರ್ಯಕ್ರಮ ನಿರೂಪಿಸಿದರು.

ಗ್ರಾ.ಪಂ ಅಧ್ಯಕ್ಷೆ ನೀಲವ್ವ ಮಾದರ ಕಾರ್ಯಕ್ರಮ ಉದ್ಘಾಟಿಸಿದರು. ಉಪಾಧ್ಯಕ್ಷ ಮಹಾಂತಗೌಡ ಪಾಟೀಲ, ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯೆ ಗೀತಾ ಪೂಜಾರ, ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಗೊಜನೂರಿನ ಮುಖ್ಯೋಪಾಧ್ಯಾಯ ಬಿ.ಎಚ್ ನಡುವಿನಮನಿ, ಅಶೋಕ ಸೊರಟೂರ, ಬಸವರಾಜ ಸಂಶಿ, ನಾಗರಾಜ ಮಜ್ಜಿಗುಡ್ಡ, ಶಿಕ್ಷಕರಾದ ನಾರಾಯಣ ಹೊಸೂರ, ಶಿವರಾಜಕುಮಾರ್ ಭದ್ರಾಪುರ, ಮಹೇಶಕುಮಾರ ಟಿ, ಎಸ್.ಡಿ. ಕರೇಗೌಡರ, ಅಮೀರ ನದಾಫ, ಶೋಭಾ ಬೆಟಗೇರಿ, ಮಹೇಶ ಚವ್ವಾಣ, ಮಹ್ಮದ್ ಗೌಸ್ ಎಂ, ಮಹಾಂತೇಶ ಕಾಶಿಕೋಯಿ, ಮಧುಮತಿ ಪಾಟೀಲ, ಶಿವಾನಂದ. ಎಂ ಉಪಸ್ಥಿತರಿದ್ದರು.

### ಆಲ್ ಇಂಡಿಯಾ ಎಸ್‌ಎಸ್‌ಕೆ ಕ್ರಿಕೆಟ್ ಟೂರ್ನಾಮೆಂಟ್

# ಆರೋಗ್ಯವಂತರಾಗಲು ಕ್ರೀಡೆ ಅತ್ಯಗತ್ಯ




■ವಿಜಯಸಾಕ್ಷಿ ಸುದ್ದಿ, ಗದಗ

ಕ್ರೀಡೆಗಳು ಯುವಕರನ್ನು ದೈಹಿಕವಾಗಿ, ಮಾನಸಿಕವಾಗಿ ಸದೃಢವಾಗಿಸುತ್ತವೆ. ಪ್ರತಿದಿನ ಕ್ರೀಡೆಗಳಲ್ಲಿ ಪಾಲ್ಗೊಳ್ಳುವದರಿಂದ ಹೆಚ್ಚು ಆರೋಗ್ಯವಂತರಾಗುತ್ತೇವೆ ಎಂದು ರಿಯಲ್ ಎಸ್ಟೇಟ್ ಉದ್ಯಮಿ ಹಾಗೂ ಎಸ್‌ಎಸ್‌ಕೆ ಸಮಾಜದ ಯುವ ಮುಖಂಡ ರಾಘು ಭರಾಡ ಹೇಳಿದರು.

ಅವರು ನಗರದ ವಿದ್ಯಾದಾನ ಸಮಿತಿ ಹೈಸ್ಕೂಲ್ ಮೈದಾನದಲ್ಲಿ ಸಹಸ್ರಾರ್ಜುನ ಕ್ರಿಕೆಟ್ ಕ್ಲಬ್ ಗದಗ, ಎಸ್‌ಎಸ್‌ಕೆ ಸಮಾಜ ಪಂಚ ಟ್ರಸ್ಟ್ ಕಮಿಟಿ, ತರುಣ ಸಂಘ, ಮಹಿಳಾ ಮಂಡಳದ ಸಹಯೋಗದಲ್ಲಿ ನಡೆಯುತ್ತಿರುವ ಆಲ್ ಇಂಡಿಯಾ ಎಸ್‌ಎಸ್‌ಕೆ ಸಮಾಜದ ಕ್ರಿಕೆಟ್ ಟೂರ್ನಾಮೆಂಟ್‌ನಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಶನಿವಾರ ಜರುಗಿದ ಪಂದ್ಯಾವಳಿಯಲ್ಲಿ ಶ್ರೀ ಸಹಸ್ರಾರ್ಜುನ ಕ್ರಿಕೆಟ್ ಕ್ಲಬ್ ಗದಗ, ಮಹಾರಾಷ್ಟ್ರದ ಸೋಲ್ಲಾಪೂರ ಜಿಪಿಎಂ, ಹುಬ್ಬಳ್ಳಿ ಲವೇನ್ ಫೈಟರ್ಸ್, ಬಾಗಲಕೋಟ ಸಿ.ಸಿ. ತಂಡಗಳು ಸೆಮಿಫೈನಲ್‌ಗೆ ಪ್ರವೇಶ ಪಡೆದಿದ್ದು, ರವಿವಾರ ಬೆಳಿಗ್ಗೆ 9 ಗಂಟೆಗೆ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಸೆಣಸಲಿವೆ.

ಇನ್ನೋರ್ವ ಮುಖ್ಯ ಅತಿಥಿ ಸಂತೋಷ ಚೆನ್ನಪ್ಪನವರ ಮಾತನಾಡಿ, ಎಸ್‌ಎಸ್‌ಕೆ ಸಮಾಜದ ಯುವಕರು ಆಲ್ ಇಂಡಿಯಾ ಕ್ರಿಕೆಟ್ ಪಂದ್ಯಾವಳಿಯನ್ನು ಹಮ್ಮಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ ಎಂದರು.

ಎಸ್‌ಎಸ್‌ಕೆ ಸಮಾಜದ ಮುಖಂಡರಾದ ರಾಜು ಬದಿ ಮಾತನಾಡಿ, ಯುವಕರು ದುಶ್ಚಟಗಳನ್ನು ದೂರವಿಟ್ಟು, ಕ್ರೀಡೆಗಳ ಮೂಲಕ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಹೇಳಿದರು. ಇದಕ್ಕೂ ಮುನ್ನ ಸೋಲಾಪೂರ ನಮೋ ಸಿಸಿ ಹಾಗೂ ಬೆಳಗಾವಿ ಸಹಸ್ರಾರ್ಜುನ ಸಿಸಿ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ವಿಜೇತ ಬೆಳಗಾವಿ ಸಹಸ್ರಾರ್ಜುನ ಸಿಸಿ ತಂಡದ ಆಟಗಾರ ಕಿರಣ ಭರಾಡೆ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಈ ಸಂದರ್ಭದಲ್ಲಿ ಟೂರ್ನಾಮೆಂಟ್ ಪ್ರಾಯೋಜಕರಾದ ಉದ್ಯಮಿ ರಾಮಚಂದ್ರ ಶಿದ್ಲಿಂಗ, ವಿಜಯ ಬೋಚಗೇರಿ, ನಾಗರಾಜ ಖೋಡೆ, ಯುವ ಮುಖಂಡ ಶ್ರೀಕಾಂತ ಬಾಕಳೆ ಮುಂತಾದವರು ಇದ್ದರು. ಪ್ರವೀಣ ಜಿತೂರಿ ಸ್ವಾಗತಿಸಿದರು. ಸೋಮು ಅಂಗಡಿ ನಿರೂಪಿಸಿದರು.

### ಹುಲಕೋಟಿ ಕಾನೂನು ಮಹಾವಿದ್ಯಾಲಯದ ಕಾಲೇಜು ಯೂನಿಯನ್ ಉದ್ಘಾಟನೆ

# ಕಕ್ಷಿದಾರರಿಗೆ ನ್ಯಾಯ ಒದಗಿಸುವ ಪ್ರಯತ್ನ ಮಾಡಿ

■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳು 24 ಗಂಟೆಗಳ ಕಾಲವೂ ವಿದ್ಯಾರ್ಥಿಯಾಗಿಯೇ ಇರಬೇಕು. ವಿದ್ಯಾರ್ಥಿಗಳಲ್ಲಿ ಶಿಸ್ತು, ಕಾರ್ಯಕ್ಷಮತೆ ಮೊದಲು ಕೆಲಸ ಮಾಡಬೇಕು. ಆ ಕೆಲಸ ನಮಗೆ ತೃಪ್ತಿ ತರಬೇಕು, ಪೂರಕವಾಗಿ ಪ್ರಾಮಾಣಿಕತೆ ಹೊಂದಿರಬೇಕು. ಪುಸ್ತಕಗಳ ಜ್ಞಾನ ವಿದ್ಯಾರ್ಥಿಗಳಲ್ಲಿ ಬೆರಗು ಮೂಡಿಸುವುದು ಎಂದು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣೆ ಸಂಸ್ಥೆಯ ನಿರ್ದೇಶಕ ಪ್ರೊ. ಡಾ. ಚಿದಾನಂದರಡ್ಡಿ ಎಸ್.ಪಾಟೀಲ ನುಡಿದರು.



ನಗರದ ಹುಲಕೋಟಿ ಶಿಕ್ಷಣ ಸಂಸ್ಥೆಯ ಕಾನೂನು ಮಹಾವಿದ್ಯಾಲಯದ 2023-24ನೇ ಶೈಕ್ಷಣಿಕ ವರ್ಷದ ನೂತನ ಒಕ್ಕೂಟ, ಜಿಮಖಾನ ಮತ್ತು ಎನ್‌ಎಸ್‌ಎಸ್ ಚಟುವಟಿಕೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅತಿಥಿಗಳಾಗಿ ಆಗಮಿಸಿದ್ದ ಹೆಚ್‌ಸಿಇಎಸ್ ಕಾನೂನು ಮಹಾವಿದ್ಯಾಲಯದ ಉಪಾಧ್ಯಕ್ಷ, ನ್ಯಾಯವಾದಿ ಎಸ್.ಕೆ. ನದಾಫ ಮಾತನಾಡಿ, ಡಾ. ಚಿದಾನಂದರಡ್ಡಿಯವರು ನಮ್ಮ ಕಾಲೇಜಿಗೆ ಎರಡನೇ ಬಾರಿಗೆ ಆಗಮಿಸಿದ್ದು, ಇವರು ಸಲಹೆಗಳನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸಿ ತಮ್ಮ ಅಧ್ಯಯನ ಕೈಗೊಳ್ಳಬೇಕೆಂದು ಕರೆ ನೀಡಿದರು.

ಗೌರವ ಅತಿಥಿಗಳಾಗಿ ಪಾಲ್ಗೊಂಡಿದ್ದ ಹೆಚ್‌ಸಿಇಎಸ್ ಸೊಸೈಟಿ ಅಧ್ಯಕ್ಷ ರವಿ ಮೂಲಿಮನಿ, ಆರ್.ಎಸ್. ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾನೂನು ಮಹಾ ವಿದ್ಯಾಲಯ ಪ್ರಾಚಾರ್ಯೆ ಪಲ್ಲವಿ ಎಸ್.ಬಿಯ್ಯರ, ಡಾ. ಚಿಂದಾನಂದ ರಡ್ಡಿಯವರನ್ನು ಕಾಲೇಜಿನ ಪರವಾಗಿ ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಪ್ರೊ. ಜೈ ಹನುಮಾನ, ರಾಚಯ್ಯನವರ, ಪರಶುರಾಮ, ಎಸ್.ಐ. ಅಣ್ಣಿಗೇರಿ, ಡಿ.ಎಲ್. ಕುಲಕರ್ಣಿ, ಎಂ.ವ್ಹಿ. ಹಿರೇಮಠ, ಸಂಗೀತಾ ಎಸ್.ಪಾಟೀಲ, ವಿಶ್ವನಾಥ ಹಿರೇಮಠ, ಮಹಾಂತೇಶ, ಬಸಮ್ಮ ಪಿ., ನಜ್ಮಾ ಎನ್. ಮುಲ್ಲಾ, ಗುರುರಾಜ ಗೌರಿ, ಕಾಲೇಜು ಒಕ್ಕೂಟದ ಪ್ರ. ಕಾರ್ಯದರ್ಶಿ ಅಂಜುಮ್ ಎಂ., ಸಾಂಸ್ಕೃತಿಕ ಕಾರ್ಯದರ್ಶಿ ಇಮಾಮ ಭಾಷಾ, ಕವಿತಾ ಭಾವಿ, ಕ್ರೀಡಾ ಕಾರ್ಯದರ್ಶಿ ರಮೇಶ ಗುರಿಕಾರ, ಹನುಮಕ್ಕಾ ಬಿ., ಮಹಿಳಾ ಪ್ರತಿನಿಧಿ ಪವಿತ್ರಾ, ಕಾನೂನು ನೆರವು ಪ್ರತಿನಿಧಿ ರಾಕೇಶ ಆಲೂರ, ಕಾಲೇಜು ನಿಯತಕಾಲಿಕ ಸಂಪಾದಕರಾದ ಪ್ರೇಮಲೇಖಾ ಎಸ್. ಸೇರಿದಂತೆ ಕಾಲೇಜು ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಹಾಗೂ ಕಾನೂನು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹೆಚ್‌ಸಿಇಎಸ್ ಕಾನೂನು ಮಹಾವಿದ್ಯಾಲಯದ ಅಧ್ಯಕ್ಷ ಎಸ್.ಕೆ. ಪಾಟೀಲ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಓದಿನೊಂದಿಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಮುಂದಿರಬೇಕು. ನೀವೆಲ್ಲರೂ ಮುಂದೆ ನ್ಯಾಯವಾದಿಗಳಾಗುವ ಸಿದ್ಧತೆಯಲ್ಲಿರುವುದರಿಂದ ನಿಮ್ಮ ಕಕ್ಷಿದಾರರಿಗೆ ನ್ಯಾಯ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನುಡಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka